# ಆಧ್ಯಾತ್ಮಿಕ ಆಸ್ವಾದನೆಗಳು

| | |
|---|---|
| ೧ | ಆಂತರಂಗದಲ್ಲಿನ ದೈವತತ್ತ್ವದ ಅರಿವಿಗೋಸ್ಕರ ಶೈವಪದ್ಧತಿ.<br>ಬಹಿರಂಗದಲ್ಲಿನ ದೈವತತ್ತ್ವದ ಅರಿವಿಗೋಸ್ಕರ ವೈಷ್ಣವಪದ್ಧತಿ.<br>ಆಂತರಂಗ–ಬಹಿರಂಗಗಳನ್ನು ವ್ಯಾಪಿಸಿರುವ ದೈವತತ್ತ್ವದ ಅರಿವಿಗೋಸ್ಕರ ಬ್ರಾಹ್ಮಣಪದ್ಧತಿ.<br>ಮೊದಲನೆಯದು ತಂತ್ರಗಳಲ್ಲಿ, ಎರಡನೆಯದು ಪುರಾಣಗಳಲ್ಲಿ, ಕೊನೆಯದು ವೇದಗಳಲ್ಲಿ.<br>ಕೊನೆಯದು ಮೊದಲು ರಚನೆಯಾಗಿದೆ, ಮೊದಲಿನದು ಕೊನೆಗೆ ರಚನೆಯಾಗಿದೆ. |
| ೨ | ಅಂತರಂಗದ ವಿಚಾರಣೆಯಲ್ಲಿ ಅದ್ವೈತ, ಬಹಿರಂಗದ ಆಚರಣೆಯಲ್ಲಿ ದ್ವೈತ –<br>ಇದು ಕರ್ಮಯೋಗಿಗೆ ವಿದಿತ ಹಾಗೂ ಸಮ್ಮತ. |
| ೩ | ಅಜ್ಞಾನದಿಂದ ಉಂಟಾಗುವ ನಂಬಿಕೆಯು ಅನರ್ಥಕಾರಿ;<br>ಅಲ್ಪಜ್ಞಾನದಿಂದ ಉಂಟಾಗುವ ನಂಬಿಕೆಯು ಅಪಾಯಕಾರಿ.<br>ಮೊದಲನೆಯದು ಅಲ್ಪಮತಿಗಳನ್ನು ಅಲ್ಪರಾಗಿಯೇ ಇರಿಸುತ್ತದೆ;<br>ಎರಡನೆಯದು ಶೀಘ್ರಮತಿಗಳನ್ನು ಅಲ್ಪರನ್ನಾಗಿಸುತ್ತದೆ. |
| ೪ | ಅಜ್ಞಾನಿಯು ಮುಗ್ಧನಾಗಿದ್ದು ವಿಧೇಯನಾಗಿದ್ದರೆ ಧಾರ್ಮಿಕನಾಗುತ್ತಾನೆ.<br>ಆದರೆ ಮೂಢನಾಗಿದ್ದು ಗರ್ವಿತನಾಗಿದ್ದರೆ ಚಾರ್ವಾಕನಾಗುತ್ತಾನೆ. |
| ೫ | ಅಜ್ಞಾನಿಗಳಿಗೆ ಭುಕ್ತಿಯ ಜೀವನವೇ ಸಂಪತ್ತು, ಮುಕ್ತಿಯ ಮರಣವೇ ಆಪತ್ತು.<br>ಜ್ಞಾನಿಗಳಿಗೆ ಭುಕ್ತಿಯ ಜೀವನವೇ ಆಪತ್ತು, ಮುಕ್ತಿಯ ಮರಣವೇ ಸಂಪತ್ತು. |
| ೬ | ಅದ್ವೈತವನ್ನರಿಯಲು ಬುದ್ಧಿಯು ತೀಕ್ಷ್ಣವೂ ಆಗಿರಬೇಕು, ಅಂತೆಯೇ ವಿಶಾಲವೂ ಆಗಿರಬೇಕು.<br>ಬುದ್ಧಿಯ ವೈಶಾಲ್ಯಕ್ಕೆ ಭಕ್ತಿಯ ಅಗತ್ಯವಿದೆ; ಬುದ್ಧಿಯ ತೀಕ್ಷ್ಣತೆಗೆ ಜ್ಞಾನದ ಅಗತ್ಯವಿದೆ.<br>ಇವೆರಡೂ ಇಲ್ಲದಿರುವವನು ಅದ್ವೈತವನ್ನರಿಯಲು ಉತ್ತಮಾಧಿಕಾರಿಯಲ್ಲ. |
| ೭ | ಅದ್ವೈತವನ್ನು ವಿಚಾರಣೆಯಿಂದ ಅರಿತಿರಬೇಕು; ದ್ವೈತವನ್ನು ಆಚರಣೆಯಲ್ಲಿ ಪಾಲಿಸುತ್ತಿರಬೇಕು. |
| ೮ | ಅಧ್ಯಾತ್ಮದ ಮಾರ್ಗದಲ್ಲಿ ಅಲ್ಪಜ್ಞಾನಕ್ಕಿಂತ ಅಜ್ಞಾನವು ಶ್ರೇಷ್ಠ. ಯಾಕೆಂದರೆ ಅಜ್ಞಾನಿಯು ಆರಂಭದಿಂದ ಕಲಿಯುತ್ತಾನೆ; ಅಲ್ಪಜ್ಞಾನಿಯು ತಪ್ಪಾಗಿ ಕಲಿತಿರುವುದನ್ನು ಮರೆಯಲು ಸಾಧ್ಯವಾದರೆ ಮಾತ್ರ ಜ್ಞಾನಿಯಾದಾನು. |
| ೯ | ಅನುಭವಗಳು ವೈಯಕ್ತಿಕ; ಆದರೆ, ತತ್ತ್ವವು ಸಾರ್ವತ್ರಿಕ. ಆದ್ದರಿಂದ, ಮತಗಳು ವೈಯಕ್ತಿಕ; ಧರ್ಮವು ಸಾರ್ವತ್ರಿಕ. ಅನುಭವಗಳಿಂದ ಮತಗಳು; ಆದರೆ, ತತ್ತ್ವದಿಂದ ಧರ್ಮ. ಆದ್ದರಿಂದ, ಮತಗಳು ಅನೇಕ; ಧರ್ಮವು ಒಂದೇ. ಆಸ್ತಿಕತೆಯೇ ಧರ್ಮ; ನಾಸ್ತಿಕತೆಯೇ ಅಧರ್ಮ. ಆದ್ದರಿಂದ, ಧರ್ಮವು ದೈಹಿಕವೂ ಅಲ್ಲ, ಮಾನಸಿಕವೂ ಅಲ್ಲ. ಧರ್ಮವು ಪೂರ್ತಿ ಆತ್ಮಿಕ; ಆದ್ದರಿಂದ ಧರ್ಮವು ದೈವಿಕ. ದೈವನಿಷ್ಠೆಯು ಧರ್ಮ; ದೈವನಿಂದೆಯು ಅಧರ್ಮ. ಅಷ್ಟೇ. |
| ೧೦ | ಅನುಭವಿಸದೇ ಅರಿಯುವವನು ಉತ್ತಮನು. ಅನುಭವಿಸಿಯೇ ಅರಿಯುವವನು ಮಧ್ಯಮನು.<br>ಅನುಭವಿಸಿಯೂ ಅರಿಯದವನು ಅಧಮನು. |
| ೧೧ | ಅದ್ಭುತಗಳನ್ನು ತೋರಿಸಿ ನಿನ್ನನ್ನು ನಂಬಿಸುವ ಅಗತ್ಯ ಭಗವಂತನಿಗಿಲ್ಲ. ಸಪ್ತಧಾತುಗಳ ಶರೀರದಲ್ಲಿ ಜೀವವಾಗಿ ನಡೆಸುತ್ತಿರುವ ಅದ್ಭುತ ಸಾಲದೇ? |
| ೧೨ | ಅಭಿಮಾನಕ್ಕೂ ಅಹಂಭಾವಕ್ಕೂ ನಡುವಿನ ಅಂತರ ಬಹಳ ಸೂಕ್ಷ್ಮವಾದುದು. ಪದೇ ಪದೇ |

| | |
|---|---|
| | ಆತ್ಮಾವಲೋಕನವು ಆಗದಿದ್ದಲ್ಲಿ, ಕ್ರಮೇಣ ಅಭಿಮಾನವೇ ಅಹಂಭಾವವಾಗಿ ಮಾರ್ಪಡುವುದು, ಹಾಗೂ ವ್ಯಕ್ತಿತ್ವದ ಅಧಃಪತನಕ್ಕೆ ಅದೇ ನಾಂದಿಯಾಗುವುದು, ಹಾಗೂ ಜೀವವು ದೈವದಿಂದ ದೂರವಾಗುವುದು. |
| ೧೩ | ಅಭೇದಭಾವದಿಂದ ಅಹಂಕಾರ. ಭೇದಭಾವದಿಂದ ಮಮಕಾರ.<br>ಭೇದ–ಅಭೇದಗಳನ್ನು ಮೀರಿದಾಗ ಬ್ರಹ್ಮಭಾವ. |
| ೧೪ | ಅರಿವು ವಸ್ತುವಲ್ಲ; ಅರಿವು ಚೈತನ್ಯವಲ್ಲ; ಅರಿವೇ ಆತ್ಮವು. |
| ೧೫ | ಅಲ್ಪಜ್ಞಾನಿಯು ಮಾತನಾಡುತ್ತಲೇ ಇರುತ್ತಾನೆ; ಅಲ್ಲಿಯವರೆಗೂ ಪೂರ್ಣಜ್ಞಾನಿಯು ಸುಮ್ಮನೇ ಇರುತ್ತಾನೆ. |
| ೧೬ | ಅವನು ನೀನಾಗಿದ್ದು ಅವನ ಆಯ್ಕೆ; ಅದು ಅವನ ಕೃಪೆಯಿಂದಲೇ.<br>ನೀನು ಅವನಾಗುವುದು ನಿನ್ನ ಆಯ್ಕೆ; ಅದೂ ಅವನ ಕೃಪೆಯಿಂದಲೇ. |
| ೧೭ | ಅವಿದ್ಯಾವಂತರು ತಿಳಿಯದೇ ಇರುವುದರಿಂದಾಗಿ ಮೂಢರು;<br>ವಿದ್ಯಾವಂತರು ತಿಳಿದಿರುವೆವೆಂಬ ಭ್ರಮೆಯಿಂದಾಗಿ ಮೂರ್ಖರು.<br>ಅವರು ತಿಳಿಯದೇ ತಪ್ಪು ಮಾಡಿದರೆ, ಇವರು ತಿಳಿದೇ ತಪ್ಪು ಮಾಡುವವರು. |
| ೧೮ | ಅಹಂಕಾರದ ವಿನಾಶವು ಯೋಗಕ್ಕೆ ಹಾಗೂ ಸಿದ್ಧಿಗಳಿಗೆ ಮೂಲ;<br>ಅಹಂಕಾರದ ಉತ್ಪತ್ತಿಯು ರೋಗಕ್ಕೆ ಹಾಗೂ ವ್ಯಾಧಿಗಳಿಗೆ ಮೂಲ. |
| ೧೯ | ಅಹಂಭಾವವೇ ಪಾಪ. ಸೋಽಹಂಭಾವವೇ ಪುಣ್ಯ. |
| ೨೦ | ಆತ್ಮಜ್ಞಾನಕ್ಕೆ ಮೂರು ಮಾರ್ಗಗಳು – ಗುರುವಾಕ್ಯಶ್ರವಣ, ಶ್ರುತಿವಾಕ್ಯಗಳ ಅಧ್ಯಯನ, ಯೌಗಿಕ ಸಾಧನ. |
| ೨೧ | ಆತ್ಮಜ್ಞಾನಿಗೆ ಕರ್ತವ್ಯವೆಂಬುದು ಇಲ್ಲ, ಆದರೆ ಧರ್ಮವೆಂಬುದು ಇದೆ. ಅಂದರೆ ಲೋಕವ್ಯವಹಾರದಲ್ಲಿ ವಿರಕ್ತಿಯಿದ್ದರೂ ಕೂಡ, ತನ್ನ ಬಳಿ ಬಂದವರನ್ನು ಆತ್ಮಜ್ಞಾನಿಗಳನ್ನಾಗಿಸುವ ಹೊಣೆಯಿದೆ. ಅವಧೂತನಿಗೆ ಇವೆರಡೂ ಇಲ್ಲ. |
| ೨೨ | ಆಧ್ಯಾತ್ಮಿಕ ಸಾಧಕನು ಜೇನುನೊಣದಂತಿರಬೇಕು; ಬೇರೆ ಬೇರೆ ಹೂವುಗಳಿಂದ ಮಕರಂದವನ್ನು ಹೀರಿ ತನ್ನ ಗೂಡಿನಲ್ಲಿ ಸಂಗ್ರಹಿಸಬೇಕು. ಆದರೆ ಎಚ್ಚರ! ಉತ್ತಮ ಗುರುವಿನ ಮಾರ್ಗದರ್ಶನ, ಪರಿಶೀಲನೆಗಳಿಲ್ಲದೇ ಹೋದರೆ ಜೇನುನೊಣವಾಗುವ ಬದಲು ಬರೀ ನೊಣವಾದೀಯೆ! |
| ೨೩ | ಆಧ್ಯಾತ್ಮಿಕ ಸಾಧಕನಿಗೆ ಒಬ್ಬ ಗುರು, ಒಂದು ಪಥ; ಆದ್ದರಿಂದ ಸಾಧನೆಯು ಪೂರ್ಣ.<br>ವ್ಯಾವಹಾರಿಕ ಸಾಧಕನಿಗೆ ಅನೇಕ ಗುರುಗಳು, ಅನೇಕ ಪಥಗಳು; ಆದ್ದರಿಂದ ಸಾಧನೆಯು ಶೂನ್ಯ. |
| ೨೪ | ಆರೋಗ್ಯವನ್ನು ಕಳೆದುಕೊಳ್ಳದೆಯೇ ಅಹಂಕಾರವನ್ನು ಉಳಿಸಿಕೊಳ್ಳುವುದು – ಭೋಗ.<br>ಆರೋಗ್ಯವನ್ನು ಕಳೆದುಕೊಂಡು ಅಹಂಕಾರವನ್ನು ಉಳಿಸಿಕೊಳ್ಳುವುದು – ದೈಹಿಕ ರೋಗ.<br>ಆರೋಗ್ಯವನ್ನು ಉಳಿಸಿಕೊಂಡು ಅಹಂಕಾರವನ್ನು ಬೆಳೆಸಿಕೊಳ್ಳುವುದು – ಮಾನಸಿಕ ರೋಗ.<br>ಆರೋಗ್ಯವನ್ನು ಕಳೆದುಕೊಂಡು ಅಹಂಕಾರವನ್ನು ಕಳೆದುಕೊಳ್ಳುವುದು – ಆತ್ಮಿಕ ರೋಗ.<br>ಆರೋಗ್ಯವನ್ನು ಕಳೆದುಕೊಳ್ಳದೆಯೇ ಅಹಂಕಾರವನ್ನು ಕಳೆದುಕೊಳ್ಳುವುದು – ಯೋಗ. |
| ೨೫ | ಆಗ ಸಂಸಾರಿಯು ಸನ್ಯಾಸಿಯಂತೆ ಇದ್ದನು. ಈಗ ಸನ್ಯಾಸಿಯು ಸಂಸಾರಿಯಂತೆ ಇದ್ದಾನೆ.<br>ಕಲಿಯುಗದಲ್ಲಿ, ಸನ್ಯಾಸಿಯ ಸಂಸಾರವೇ ತುಂಬಾ ದೊಡ್ಡದಾಗಿರುವಾಗ, ಸನ್ಯಾಸಿ ಹೇಗೆ ಶ್ರೇಷ್ಠನಾದಾನು?<br>ಆದ್ದರಿಂದ ಸನ್ಯಾಸಿಗಿಂತ ಸಂಸಾರಿಯೇ ಶ್ರೇಷ್ಠನು. |
| ೨೬ | ಆಸೆಯು ದುಃಖಕ್ಕೆ ಮೂಲವಲ್ಲ; ನಿರಾಸೆ–ದುರಾಸೆಗಳು ದುಃಖಕ್ಕೆ ಮೂಲಗಳು. |
| ೨೭ | ಉತ್ತಮ ಜೀವನಕ್ಕೆ ಮುಖ್ಯವಾಗಿ ಅಗತ್ಯವಾದವುಗಳು ಮೂರು : ಆರೋಗ್ಯ, ಹಣ ಮತ್ತು ಜ್ಞಾನ. ಈ ಮೂರನ್ನೂ ಶ್ರಮದಿಂದ ಸಂಪಾದಿಸಿಕೊಳ್ಳಬೇಕು. ಯಾವ ಸಂಬಂಧಗಳು ಈ ಮೂರಕ್ಕೆ ಸಾಧಕವಾಗುವವೋ ಅವುಗಳನ್ನು ಉಳಿಸಿಕೊಳ್ಳಬೇಕು; ಯಾವ ಸಂಬಂಧಗಳು ಈ ಮೂರಕ್ಕೆ ಬಾಧಕವಾಗುವವೋ ಅವುಗಳಿಂದ ಕಳಚಿಕೊಳ್ಳಬೇಕು. |

| | |
|---|---|
| ೨೮ | ಉಪನಯನವು ಹುಟ್ಟಿದವನನ್ನು ಉತ್ತಮನನ್ನಾಗಿ ಬದುಕುವಂತೆ ಮಾಡಿಸುವ ಪ್ರಕ್ರಿಯೆ. ಅಂತ್ಯೇಷ್ಟಿಯು ಸತ್ತವನನ್ನು ಮತ್ತೆ ಉತ್ತಮನನ್ನಾಗಿ ಹುಟ್ಟುವಂತೆ ಮಾಡಿಸುವ ಪ್ರಕ್ರಿಯೆ. ಈ ಎರಡೂ ಸಂಸ್ಕಾರಗಳಲ್ಲಿ ವ್ಯಕ್ತಿಯದೇನೂ ಪಾತ್ರವಿಲ್ಲ; ಆರಂಭದಲ್ಲಿ ಹಿರಿಯರು, ಅಂತ್ಯದಲ್ಲಿ ಕಿರಿಯರು – ಇವರು ಇವನ ವ್ಯಕ್ತಿತ್ವವಿಕಾಸಕ್ಕೆ ಪೂರಕವಾಗಿರುವವರು. ಆದ್ದರಿಂದ ಸಂಧ್ಯಾವಂದನಾಕ್ರಮ ಹಾಗೂ ಶ್ರಾದ್ಧಕರ್ಮಗಳು ತಂತ್ರವಿದ್ಯೆಗೆ ಸನಾತನ ಸಂಸ್ಕೃತಿಯ ಅದ್ಭುತವಾದ ಆರ್ಷೇಯ ಕೊಡುಗೆಗಳು – ಮೊದಲನೆಯದು ಋಗ್ವೇದದಿಂದ, ಕೊನೆಯದು ಅಥರ್ವಣವೇದದಿಂದ. ಕೊನೆಯದರಲ್ಲಿ ವ್ಯಕ್ತಿಯದೇನೂ ಸ್ವಂತದ ಆಚರಣೆಯಿಲ್ಲ, ಆದರೆ ಕೊನೆಯದು ಅಗತ್ಯವಾಗುವುದು ಮೊದಲನೆಯದನ್ನು ಅವನು ನಿರ್ಲಕ್ಷಿಸಿದ್ದರಿಂದ. ಮೊದಲನೆಯದನ್ನು ಸದಾಚಾರದಲ್ಲಿಟ್ಟುಕೊಂಡರೆ ಕೊನೆಯದರ ಅಗತ್ಯವಿಲ್ಲ.<br>ನಮಃ ಪರಮಋಷಿಭ್ಯೋ ನಮಃ ಪರಮಋಷಿಭ್ಯಃ । |
| ೨೯ | ಉಸಿರು ಇರುವಾಗ ಶಿವ; ಉಸಿರು ನಿಂತಾಗ ಶವ; ಅಷ್ಟೇ ವ್ಯತ್ಯಾಸ. |
| ೩೦ | ಋಗ್ವೇದ : ಸ್ತುತಿ : ಮನಸ್ ಶುದ್ಧಿ. ಯಜುರ್ವೇದ : ಯಜ್ಞ : ಕಾಯ ಶುದ್ಧಿ.<br>ಸಾಮವೇದ : ಗಾನ : ವಾಕ್ ಶುದ್ಧಿ. ಅಥರ್ವಣವೇದ : ತಂತ್ರ : ಕರ್ಮ ಶುದ್ಧಿ.<br>ತ್ರಿಕರಣಶುದ್ಧಿಯಿಲ್ಲದೆಯೇ ಕರ್ಮ ಶುದ್ಧಿ ಸಾಧ್ಯವಿಲ್ಲ. |
| ೩೧ | ಋಗ್ವೇದವು ಜಗತ್ತಿನ ಅತಿ ಪುರಾತನ ಗ್ರಂಥ; ಸನಾತನ ಸಂಸ್ಕೃತಿಯು ಜಗತ್ತಿನ ಅತಿ ಪುರಾತನ ಸಂಸ್ಕೃತಿ; ಭರತಖಂಡದ ಜೀವನಶೈಲಿಯು "ಸಿಂಧೂ" ನದಿಯ ನಾಗರಿಕತೆಯಾಗಿ, ನಂತರ ಮ್ಲೇಚ್ಛರಿಂದ "ಹಿಂದೂ" ಎಂಬ ಅಪಭ್ರಂಶ ಶಬ್ದವಾಗಿ, ಪುರಾತನ ಜೀವನ ಸಂಸ್ಕೃತಿಯು ಧರ್ಮವೆಂದು ಕರೆಯಲ್ಪಟ್ಟು, ಇಂದು "ಹುಂಡಿ" ಧರ್ಮವಾಗಿರುವುದು ಎಂತಹ ವಿಪರ್ಯಾಸ! |
| ೩೨ | ಋತವು ಪ್ರಕಟಿತವಾದ ಸತ್ಯ. ಸತ್ಯವು ಅಪ್ರಕಟಿತವಾದ ಋತ.<br>ಋತವನ್ನರಿಯದವನು ಅನೃತವನ್ನಾಡುತ್ತಾನೆ – ಅವನು ಪಾಷಂಡ.<br>ಸತ್ಯವನ್ನರಿಯದವನು ಅಸತ್ಯವನ್ನಾಡುತ್ತಾನೆ – ಅವನು ನಾಸ್ತಿಕ.<br>ಪಾಷಂಡನು ಬ್ರಹ್ಮವನ್ನು ಎಲ್ಲೆಲ್ಲಿಯೋ ಹುಡುಕುತ್ತಾ ಬಳಲುತ್ತಾನೆ.<br>ನಾಸ್ತಿಕನು ವಿಶ್ವದಲ್ಲಿ ಬ್ರಹ್ಮದ ಅಸ್ತಿತ್ವವನ್ನು ಅಲ್ಲಗಳೆಯುತ್ತಾನೆ.<br>ಇವರಿಬ್ಬರೂ ಮಾಯೆಗೆ ಬದ್ಧರಾಗಿ ಮಿಥ್ಯಾಪ್ರಪಂಚದಲ್ಲಿದ್ದಾರೆ. |
| ೩೩ | ಎಲ್ಲಿ ವೈಚಾರಿಕತೆ ಇಲ್ಲವೋ ಅಲ್ಲಿ ವೈಜ್ಞಾನಿಕತೆ ಇಲ್ಲ.<br>ಎಲ್ಲಿ ವೈಜ್ಞಾನಿಕತೆ ಇಲ್ಲವೋ ಅಲ್ಲಿ ಸೈದ್ಧಾಂತಿಕ ನಿರ್ಣಯವಿಲ್ಲ.<br>ಎಲ್ಲಿ ಸೈದ್ಧಾಂತಿಕ ನಿರ್ಣಯವಿಲ್ಲವೋ ಅಲ್ಲಿ ವಿಕಾಸಕ್ಕೆ ಆಸ್ಪದವಿಲ್ಲ. |
| ೩೪ | ಐಕ್ಯವನ್ನು ಅರಿತಿರುವಂಥ ಹಾಗೂ ಅಭೇದವನ್ನು ಕಾಣುತ್ತಿರುವಂಥ ಯೋಗಿಗಳು ಮತ್ತು ಜ್ಞಾನಿಗಳು ಮಾತ್ರ ಅದ್ವೈತಿಗಳು; ಪ್ರಪಂಚದಲ್ಲಿ ಉಳಿದವರೆಲ್ಲರೂ, ಭೇದವನ್ನು ಪಾಲಿಸುತ್ತಿರುವವರಾದ್ದರಿಂದ, ಮತ್ತು ತಮ್ಮನ್ನು ತಾವು ಎಲ್ಲಕ್ಕಿಂತ ಪ್ರತ್ಯೇಕವಾಗಿ ಕಾಣುತ್ತಿರುವವರಾದ್ದರಿಂದ, ಅವರೆಲ್ಲರೂ ದ್ವೈತಿಗಳೇ; ಯಾರೂ ಕೂಡಾ ಹೊರತಲ್ಲ. |
| ೩೫ | ಒಳಗಿರುವ ಆತ್ಮವನ್ನು ಅರಿಯದೇ, ಹೊರಗೆ ಪರಮಾತ್ಮನಿಗೆ ಗುಡಿ ಕಟ್ಟಿ ಪೂಜಿಸುವುದು;<br>ಪ್ರಾಣವಿಲ್ಲದ ಮೂರ್ತಿಗಳನ್ನು ಪ್ರತಿಷ್ಠಾಪಿಸುವುದು, ಪ್ರಾಣವಿರುವ ದೇಹವನ್ನು ನಿರ್ಲಕ್ಷಿಸುವುದು;<br>ನಿರ್ಜೀವ ಶಿಲಾವಿಗ್ರಹಗಳನ್ನು ಅಲಂಕರಿಸುವುದು, ಸಜೀವ ಶರೀರವನ್ನು ರೋಗಗಳ ಗೂಡಾಗಿಸುವುದು;<br>ದೇಹವೇ ಶ್ರೇಷ್ಠವಾದ ಕಾಣಿಕೆ ಎಂಬುದನ್ನು ಅರಿಯದೇ, ದೈವದಿಂದ ಇತರ ಕ್ಷುಲ್ಲಕ ಕಾಣಿಕೆಗಳನ್ನು ಬೇಡುವುದು; ಪ್ರಾಪ್ತಿಯಾಗಿರುವ ಅನುಗ್ರಹವನ್ನು ಅರಿಯದೇ, ವ್ಯಾವಹಾರಿಕ ಆಚರಣೆಗಳ ಮೂಲಕ ಅನುಗ್ರಹವನ್ನು ಅಪೇಕ್ಷಿಸುವುದು; – ಇದು ಆಸ್ತಿಕ್ಯವೂ ಅಲ್ಲ, ನಾಸ್ತಿಕ್ಯವೂ ಅಲ್ಲ. ಇದಕ್ಕಿಂತ ದೊಡ್ಡ |

| | |
|---|---|
| | ಮೂಢತನ ಹಾಗೂ ಮಿಥ್ಯಾಚಾರ ಇನ್ನೊಂದಿಲ್ಲ. |
| ೩೬ | ಒಳ್ಳೆಯ ಗುರುವಾಗುವುದು ಎಷ್ಟು ಕಷ್ಟವೋ ಒಳ್ಳೆಯ ಶಿಷ್ಯನಾಗುವುದೂ ಅಷ್ಟೇ ಕಷ್ಟ;<br>ಉತ್ತಮ ಶಿಷ್ಯನಾದವನೇ ನಂತರ ಉತ್ತಮ ಗುರುವಾಗಬಲ್ಲನು. |
| ೩೭ | ಒಂದು ಮಾರ್ಗದಲ್ಲಿ ಸಾಧನೆ ಸಾದರ;<br>ಅನೇಕ ಮಾರ್ಗಗಳಲ್ಲಿ ಸಾಧನೆ ಹಾದರ. |
| ೩೮ | ಒಂದು ವೇಳೆ ಮೃತ ಸಮುದ್ರವು ಭಾರತ ದೇಶದಲ್ಲಿ ಈಗ ಇದ್ದಿದ್ದರೆ, ಅದೊಂದು ಪ್ರಸಿದ್ಧ ಪುಣ್ಯಕ್ಷೇತ್ರವೆಂದು ಪ್ರಚಾರವಾಗುತ್ತಿತ್ತು. ಹಿಂದೂ ಧರ್ಮವು "ಹುಂಡಿ" ಧರ್ಮದಂತೆ ಆಗಿರುವ ಇಂದಿನ ಪರಿಸ್ಥಿತಿಯಲ್ಲಿ, ಮೃತ ಸಮುದ್ರದ ಹೆಸರು "ಅಮೃತ ಸಮುದ್ರ" ಎಂದು ಬದಲಾಗಿ ಬಿಡುತ್ತಿತ್ತು. |
| ೩೯ | ಒಂದು ಸುಳ್ಳನ್ನು ನೂರು ಜನರು ಹೇಳಿದರೆ ಅದು ಸತ್ಯವಾಗುವುದಿಲ್ಲ; ಅದು ನೂರು ಸುಳ್ಳುಗಳಾಗುತ್ತದೆ. |
| ೪೦ | ಕಣ್ಣುಗಳನ್ನು ಮುಚ್ಚಿಟ್ಟುಕೊಂಡು, ಏನನ್ನೂ ನೋಡದೇ ಇರುವುದು, ಸಾಂಖ್ಯಯೋಗ;<br>ಕಣ್ಣುಗಳನ್ನು ತೆರೆದಿಟ್ಟುಕೊಂಡು, ಏನನ್ನೂ ನೋಡದೇ ಇರುವುದು, ಕರ್ಮಯೋಗ. |
| ೪೧ | ಕಲಿಯುವುದು ಹಾಗೂ ಕಲಿಸುವುದು ಗುರುವಿನ ಧರ್ಮ;<br>ಕಲಿಯುವುದು ಅಥವಾ ಕಲಿಯದೇ ಇರುವುದು ಶಿಷ್ಯನ ಕರ್ಮ. |
| ೪೨ | ಕಷ್ಟಗಳನ್ನು ಎದುರಿಸಿ ಬದುಕುವವರು ಶಿಷ್ಟರು.<br>ಕಷ್ಟಗಳನ್ನು ಇತರರಿಗೆ ಹಂಚುವವರು ದುಷ್ಟರು.<br>ಕಷ್ಟಗಳನ್ನು ಸೃಷ್ಟಿ ಮಾಡುವವರು ಭ್ರಷ್ಟರು. |
| ೪೩ | ಕಾಮವನ್ನು ಜಯಿಸುವವರು ಪರಮಶ್ರೇಷ್ಠರು.<br>ಧೂಮವನ್ನು ಸೇವಿಸುವವರು ಪರಮನೀಚರು. |
| ೪೪ | ಕೋಪ, ತಾಪಗಳನ್ನು ತ್ಯಜಿಸದವನು ಯೋಗವಿದ್ಯೆಗೆ ಅಯೋಗ್ಯ.<br>ಮದ್ಯ, ಮಾಂಸಗಳನ್ನು ತ್ಯಜಿಸದವನು ಬ್ರಹ್ಮವಿದ್ಯೆಗೆ ಅನರ್ಹ. |
| ೪೫ | ಗುರುವಿಲ್ಲದೆ ಸಂಗೀತ, ನೃತ್ಯ, ಅಡುಗೆ ಇತ್ಯಾದಿ ಕಲೆಗಳನ್ನು ಕಲಿಯಲು ಸಾಧ್ಯವೇ?<br>ಹಾಗಿದ್ದ ಮೇಲೆ ಗುರುವಿಲ್ಲದೆ ಅಧ್ಯಾತ್ಮವಿದ್ಯೆಯನ್ನು ಕಲಿಯಲು ಸಾಧ್ಯವೇ?? |
| ೪೬ | ಗೃಹಸ್ಥರು ಬ್ರಹ್ಮಾನುಸಂಧಾನಕ್ಕೆ ಯೋಗ್ಯರಲ್ಲ ಎಂದು ಹೇಳುವವರಿಗೆ ಅಧ್ಯಾತ್ಮದ ಅರ್ಥವೇ ತಿಳಿದಿಲ್ಲ.<br>ರಾಮನು ಗೃಹಸ್ಥನಲ್ಲವೇ? ಕೃಷ್ಣನು ಗೃಹಸ್ಥನಲ್ಲವೇ? ವಾಲ್ಮೀಕಿಯು ಗೃಹಸ್ಥನಲ್ಲವೇ?<br>ವ್ಯಾಸನು ಗೃಹಸ್ಥನಲ್ಲವೇ? ಋಷಿಗಳೆಲ್ಲಾ ಗೃಹಸ್ಥರಲ್ಲವೇ? ಇವರೆಲ್ಲರೂ ಅಧ್ಯಾತ್ಮಕ್ಕೆ ಅಯೋಗ್ಯರೇ? |
| ೪೭ | ಚಿಕ್ಕ ಮಕ್ಕಳಿಗೆ ತಿಂಡಿಗಳ–ಆಟಿಕೆಗಳ ವಿಷಯ. ದೊಡ್ಡ ಮಕ್ಕಳಿಗೆ ಉಡುಪುಗಳ–ಕಥೆಗಳ ವಿಷಯ. ಯುವಕ–ಯುವತಿಯರಿಗೆ ಗೆಳೆಯ–ಗೆಳತಿಯರ ವಿಷಯ. ಜೊತೆಗೆ ಮನೋರಂಜನೆ ಹಾಗೂ ಆಟೋಟಗಳ ವಿಷಯ. ನಂತರದಲ್ಲಿ ಹಣ ಸಂಪಾದನೆ ಹಾಗೂ ಖರ್ಚುಗಳ ವಿಷಯ. ಜೊತೆಗೆ ಪ್ರೇಮಗಳ ಹಾಗೂ ಕಾಮಗಳ ವಿಷಯ. ಹೆಂಗಸರಿಗೆ ಒಡವೆಗಳ–ಅಲಂಕಾರಗಳ ವಿಷಯ. ಗಂಡಸರಿಗೆ ಆಸ್ತಿಗಳ–ವ್ಯಾಜ್ಯಗಳ ವಿಷಯ. ಮಧ್ಯವಯಸ್ಕರಿಗೆ ರಾಜಕೀಯ–ಸಾಮಾಜಿಕಗಳ ವಿಷಯ. ಇನ್ನು ಕೆಲವರಿಗೆ ಮೋಜುಗಳ–ಜೂಜುಗಳ ವಿಷಯ. ಪ್ರೌಢವಯಸ್ಕರಿಗೆ ಜನಗಳ–ರೋಗಗಳ ವಿಷಯ. ಮುದುಕ–ಮುದುಕಿಯರಿಗೆ ಮಕ್ಕಳ ಮೊಮ್ಮಕ್ಕಳ ವಿಷಯ. ಜೀವನವೆಲ್ಲಾ ಈ ವಿಷಯಗಳ ಚಿಂತೆಯಲ್ಲಿಯೇ ಕಳೆದು ಹೋಗುತ್ತಿರುವಾಗ, ಇನ್ನು ಆತ್ಮಚಿಂತನೆಗೆ ಸಮಯವೆಲ್ಲಿ! |
| ೪೮ | ಜಗತ್ತನ್ನು ಸರಿಪಡಿಸುವ ಹೊಣೆ ನಿನ್ನದಲ್ಲ; ನಿನ್ನನ್ನು ಸರಿಪಡಿಸಿಕೊಳ್ಳುವ ಹೊಣೆ ಮಾತ್ರ ನಿನ್ನದು. ಅದನ್ನು ಸಮರ್ಥವಾಗಿ ನಿಭಾಯಿಸು ಸಾಕು; ಜಗತ್ತನ್ನು ಯಾರು ಉಂಟುಮಾಡಿದ್ದಾನೋ ಅವನೇ ಸರಿಪಡಿಸುತ್ತಾನೆ. |

| | |
|---|---|
| ೪೯ | ಜಗತ್ತಿನ ಎಲ್ಲಾ ನಿಯಮಗಳನ್ನು ಮೀರಿ ನಿಂತಿರುವುದು ಕರ್ಮದ ನಿಯಮ. ಎಚ್ಚರ! ಎಚ್ಚರ! ಎಚ್ಚರ! |
| ೫೦ | ಜಗತ್ತನ್ನೇ ತೇಲಿಸುವ ಸ್ವಾಮಿಯನ್ನು ನೀನು ತೂಗುವುದೇ?<br>ಜಗತ್ತನ್ನೇ ಎಬ್ಬಿಸುವ ಒಡೆಯನನ್ನು ನೀನು ಎಬ್ಬಿಸುವುದೇ?<br>ಜಗತ್ತನ್ನೇ ಬೆಳಗುವ ದೇವನಿಗೆ ನೀನು ದೀಪ ಬೆಳಗುವುದೇ?<br>ಜಗತ್ತನ್ನೇ ಅಲಂಕರಿಸಿರುವ ಕರ್ತನನ್ನು ನೀನು ಶೃಂಗರಿಸುವುದೇ?<br>ಜಗತ್ತನ್ನೇ ವ್ಯಾಪಿಸಿರುವ ಆತ್ಮನನ್ನು ನೀನು ಒಂದೆಡೆ ಕೂರಿಸುವುದೇ? |
| ೫೧ | ಜಾಗ್ರತಾವಸ್ಥೆಯಲ್ಲಿ ಬುದ್ಧಿ-ಮನಸ್ಸುಗಳ ಉಪಯೋಗ;<br>ಸ್ವಪ್ನಾವಸ್ಥೆಯಲ್ಲಿ ಅಹಂಕಾರ-ಚಿತ್ತಗಳ ಉಪಯೋಗ;<br>ಸುಷುಪ್ತ್ಯವಸ್ಥೆಯಲ್ಲಿ ಚಿತ್ತವೊಂದರದೇ ಸಾಮ್ರಾಜ್ಯ. |
| ೫೨ | ಜಾಗ್ರತ್ತಿನಲ್ಲಿ ದ್ವೈತವಿದೆ, ಸ್ವಪ್ನದಲ್ಲಿ ವಿಶಿಷ್ಟಾದ್ವೈತವಿದೆ, ಸುಷುಪ್ತಿಯಲ್ಲಿ ಅದ್ವೈತವಿದೆ;<br>ಸುಷುಪ್ತಿಯ ಅನುಭಾವವು ಸ್ವಪ್ನದ ಅನುಭೂತಿಯಾಗಿ ಜಾಗ್ರತ್ತಿನ ಅನುಭವವಾದಲ್ಲಿ ಮೋಕ್ಷವಿದೆ. |
| ೫೩ | ಜಾಗ್ರತ್ತಿನಲ್ಲಿ ನೀನು ನೀನು, ನಾನು ನಾನು.<br>ಸ್ವಪ್ನದಲ್ಲಿ ನೀನು ನಾನು, ನಾನು ನೀನು.<br>ಸುಷುಪ್ತಿಯಲ್ಲಿ ನಾನು ನಾನು, ನಾನು ನಾನು. |
| ೫೪ | ಜೀವನವು ದುಃಖಮಯವಲ್ಲ; ಜೀವನವು ಸುಖಮಯವೂ ಅಲ್ಲ.<br>ಸುಖದುಃಖಗಳನ್ನು ಮೀರಿ ನಿಂತಾಗ ಜೀವನವು ಆನಂದಮಯ. |
| ೫೫ | ಜ್ಞಾನದ ಪ್ರಥಮ ಹಂತವು ಮನಸ್ಸಿನ ಶಕ್ತಿ.<br>ಜ್ಞಾನದ ದ್ವಿತೀಯ ಹಂತವು ಬುದ್ಧಿಯ ಯುಕ್ತಿ.<br>ಜ್ಞಾನದ ಅಂತಿಮ ಹಂತವು ಆತ್ಮದ ಭಕ್ತಿ. |
| ೫೬ | ಜ್ಞಾನಯೋಗಿಯು ಬದುಕಿನಲ್ಲಿ ದುಃಖವನ್ನೂ, ಸಾವಿನಲ್ಲಿ ಸುಖವನ್ನೂ ಕಾಣುತ್ತಾನೆ.<br>ಕರ್ಮಯೋಗಿಯು ಬದುಕು, ಸಾವುಗಳೆರಡರಲ್ಲೂ ಆನಂದವನ್ನು ಕಾಣುತ್ತಾನೆ. |
| ೫೭ | ಜ್ಞಾನವಿಲ್ಲದ ಭಕ್ತಿಯು ವ್ಯರ್ಥ; ಭಕ್ತಿಯಿಲ್ಲದ ಜ್ಞಾನವೂ ವ್ಯರ್ಥ.<br>ಜ್ಞಾನಿಯು ವಿಜ್ಞಾನಿಯಾಗಲಿಲ್ಲವೆಂದರೆ ಅವನು ಅಜ್ಞಾನಿಯೇ ಸರಿ. |
| ೫೮ | ಜ್ಞಾನೇಂದ್ರಿಯಗಳ ಮೂಲಕ ಬಂದ ಮಾಹಿತಿಗಳನ್ನು ಗ್ರಹಿಸಿ, ಕ್ಷಣಮಾತ್ರದಲ್ಲಿ ಯೋಚಿಸಿ, ಕರ್ಮೇಂದ್ರಿಯಗಳ ಮೂಲಕ ಕ್ರಿಯೆಗಳನ್ನು ಮಾಡಿಸುವಂಥದ್ದು ಮನಸ್ಸು. ಇಂದ್ರಿಯಗಳ ಈ ಹಿಂದಿನ ಅನುಭವಗಳನ್ನು ಸಂಗ್ರಹಿಸಿ, ಇಂದಿಗೂ ನಾಳೆಗೂ ಗುಪ್ತವಾಗಿ ಇಟ್ಟುಕೊಳ್ಳುವಂಥದ್ದು ಚಿತ್ತ. ಸ್ಮೃತಿಯ ಸಂಗ್ರಹವನ್ನು ವಿಶ್ಲೇಷಿಸಿ, ಒಳಿತು-ಕೆಡುಕುಗಳನ್ನೂ ಹಾಗೂ  ಧರ್ಮ-ಅಧರ್ಮಗಳನ್ನೂ ವಿವೇಚಿಸಿ, ಕರ್ಮಗಳ ಬಗೆಗೆ ನಿರ್ಧಾರಗಳನ್ನು ತೆಗೆದುಕೊಳ್ಳುವಂಥದ್ದು ಬುದ್ಧಿ. ಹಿಂದಿನ ಅನುಭವಗಳಿಗೆ ತಕ್ಕಂತೆ ಇಂದಿನ ಹಾಗೂ ಮುಂದಿನ ಕರ್ಮಗಳಲ್ಲಿ ತನ್ನನ್ನು ತಾನು ತೊಡಗಿಸಿಕೊಂಡು, ಮನಸ್ಸು-ಚಿತ್ತ-ಬುದ್ಧಿಗಳನ್ನು ಸ್ವಾರ್ಥಪರವಾಗಿ ಉಪಯೋಗಿಸಿಕೊಳ್ಳುವಂಥದ್ದು ಅಹಂ. ಇಲ್ಲಿ ಮನಸ್ಸೆಂಬುದು ಜೀವದ ಸ್ವಾಧೀನ; ಚಿತ್ತವೆಂಬುದು ಪ್ರಕೃತಿಯ ಸ್ವಾಧೀನ; ಅಹಂ ಎಂಬುದು ಮಾಯೆಯ ಸ್ವಾಧೀನ; ಬುದ್ಧಿಯು ಮಾತ್ರ ತನ್ನ ಸ್ವಾಧೀನ. ವೃಕ್ಷಗಳ ವ್ಯವಹಾರ ಚಿತ್ತದಿಂದ ಮಾತ್ರ; ಕ್ರಿಮಿ-ಕೀಟಗಳ ವ್ಯವಹಾರ ಚಿತ್ತ-ಮನಸ್ಸುಗಳಿಂದ; ಖಗ-ಮೃಗ-ಉರಗಗಳ ವ್ಯವಹಾರ ಚಿತ್ತ-ಮನಸ್ಸು-ಅಹಂಗಳಿಂದ; ಮನುಷ್ಯರ ವ್ಯವಹಾರಗಳು ಚಿತ್ತ-ಮನಸ್ಸು-ಅಹಂ-ಬುದ್ಧಿಗಳಿಂದ. ಮನುಷ್ಯರಿಗೆ ತನ್ನತನವಿರುವುದರಿಂದಾಗಿ, ಅಂದರೆ ಬುದ್ಧಿ ಇರುವುದರಿಂದಾಗಿ, ಅದು ಇರುವ ವರೆಗೂ, ಮರಳಿ ಜನ್ಮವಿದೆ; ಉಳಿದ ಜೀವಿಗಳಿಗೆ ತನ್ನತನವಿಲ್ಲದಿರುವುದರಿಂದಾಗಿ, ಅಂದರೆ ಬುದ್ಧಿಯಿಲ್ಲದಿರುವುದರಿಂದಾಗಿ, ಅವುಗಳಿಗೆ ಮರುಜನ್ಮವಿಲ್ಲ. |

| | |
|---|---|
| | ಮಾನವನ ಮನಸ್ಸು–ಚಿತ್ತ–ಅಹಂಗಳನ್ನು ಬುದ್ಧಿಯು ನಿಯಂತ್ರಿಸುವುದರಿಂದಾಗಿ, ಪ್ರತಿಯೊಂದು ಮಾನವ ಜನ್ಮದಲ್ಲಿಯೂ ಬುದ್ಧಿಯ ಸಂಪಾದನೆಯೇ ಆಗಬೇಕಾಗಿದೆ. ಎಂದಿಗೆ ಬುದ್ಧಿಯು ಸಂಪೂರ್ಣವಾಗಿ ಪ್ರಚೋದಿಸಲ್ಪಡುವುದೋ ಅಂದಿಗೆ ತನ್ನತನವು ಕಳೆದು ಹೋಗುವುದು, ಹಾಗೂ ಮೋಕ್ಷವು ಸಿದ್ಧವಾಗುವುದು; ಧಿಯೋ ಯೋನಃ ಪ್ರಚೋದಯಾತ್ । |
| ೫೯ | ತರ್ಕವು ಜ್ಞಾನದ ವಿನಿಮಯ. ವಾದವು ಅಜ್ಞಾನದ ವಿನಿಮಯ. |
| ೬೦ | ತನ್ನ ದೋಷಗಳನ್ನು ಎಣಿಸದವನು ಪರರ ದೋಷಗಳನ್ನು ಎಣಿಸಿ ಏನು ಫಲ?<br>ತನ್ನ ದೋಷಗಳನ್ನು ಎಣಿಸಿದವನು ಪರರ ದೋಷಗಳನ್ನು ಎಣಿಸಿ ಏನು ಫಲ? |
| ೬೧ | ತಪ್ಪು ಮಾಡುವ ಮೂಢನಿಗೆ ತನ್ನದು ತಪ್ಪೆಂದು ಅನ್ನಿಸುವುದಿಲ್ಲ,<br>ಯಾವುದಾದರೊಂದು ಅನಾಹುತವಾಗುವವರೆಗೂ. |
| ೬೨ | ತಮೋಗುಣಿಗಳಿಗೆ ಕರ್ಮಯೋಗ. ರಜೋಗುಣಿಗಳಿಗೆ ಜ್ಞಾನಯೋಗ. ಸತ್ತ್ವಗುಣಿಗಳಿಗೆ ಭಕ್ತಿಯೋಗ. |
| ೬೩ | "ತಾನು" ಎಂಬುದರ ಅರಿವು ಬರಬೇಕೆಂದರೆ, "ನಾನು" ಎಂಬುದರ ಅರಿವು ಹೋಗಬೇಕು. |
| ೬೪ | ತಾನು ಜ್ಞಾನಿಯಾಗಲು, ಹಾಗೂ ಇತರರನ್ನು ಜ್ಞಾನಿಗಳನ್ನಾಗಿಸಲು ಶ್ರಮಿಸುವವನು ಬ್ರಾಹ್ಮಣನು. ಉತ್ತಮ ನಾಡನ್ನು ಕಟ್ಟಲು, ಹಾಗೂ ಇತರರನ್ನು ಸುಖ–ಶಾಂತಿಗಳಿಂದ ಬದುಕುವಂತೆ ಮಾಡಲು ಶ್ರಮಿಸುವವನು ಕ್ಷತ್ರಿಯನು. ಉತ್ತಮ ಆಹಾರವಸ್ತುಗಳನ್ನು ಮತ್ತು ಇತರ ಸಾಮಗ್ರಿಗಳನ್ನು ಉತ್ಪಾದಿಸಲು, ಹಾಗೂ ಇತರರು ಅವುಗಳನ್ನು ಪಡೆಯುವಂತೆ ಮಾಡಲು ಶ್ರಮಿಸುವವನು ವೈಶ್ಯನು. ಈ ಯಾವ ಗುರಿಗಳೂ ಇಲ್ಲದೆ, ಕೇವಲ ಸ್ವಾರ್ಥಚಿಂತನೆಯಲ್ಲೇ ತೊಡಗಿದ್ದು, ಸೋಮಾರಿಯಾಗಿ ಮತ್ತು ಧೂರ್ತನಾಗಿ ಬದುಕುವವನು ಶೂದ್ರನು; ಆದ್ದರಿಂದ ಅವನು ಜ್ಞಾನಕ್ಕೆ ಅನಧಿಕಾರಿಯು. ಕುತ್ಸಿತಮತಿಗಳಿಗೆ ಧರ್ಮಗ್ರಂಥಗಳಿಂದ ಅಥವಾ ಆಧ್ಯಾತ್ಮಿಕ ಸಾಧನೆಗಳಿಂದ ಪ್ರಯೋಜನವೇನು! |
| ೬೫ | ತಾನು ದಡ್ಡನೆಂದು ಅಂದುಕೊಂಡಿರುವವನು ಜಾಣನು; ತಾನು ಜಾಣನೆಂದು ಅಂದುಕೊಂಡಿರುವವನು ದಡ್ಡನು; ಇದು ಅಧ್ಯಾತ್ಮದ ಪರಿಭಾಷೆ. |
| ೬೬ | ತಾನು ಬ್ರಹ್ಮವೆಂದರಿಯುವುದು ಬ್ರಹ್ಮವಿದ್ಯೆ. ತಾನು ಬ್ರಹ್ಮವಾಗುವುದು ತಂತ್ರವಿದ್ಯೆ. |
| ೬೭ | ತಾನೇನೂ ಒಳ್ಳೆಯದನ್ನು ಮಾಡದೇ ದೈವದಿಂದ ಒಳ್ಳೆಯದನ್ನು ಬಯಸುವವನು ಅಧಮನು.<br>ತಾನೂ ಒಳ್ಳೆಯದನ್ನು ಮಾಡಿ ದೈವದಿಂದ ಒಳ್ಳೆಯದನ್ನು ಬಯಸುವವನು ಮಧ್ಯಮನು.<br>ತಾನು ಒಳ್ಳೆಯದನ್ನೇ ಮಾಡಿ ದೈವದಿಂದ ಏನನ್ನೂ ಬಯಸದವನು ಉತ್ತಮನು. |
| ೬೮ | ತಿಳಿಯದೇ ಇರುವುದನ್ನು ತಿಳಿಯುವುದು ಜ್ಞಾನ; ತಿಳಿಯಲೇಬೇಕಾದದ್ದನ್ನು ತಿಳಿಯುವುದು ವಿಜ್ಞಾನ. |
| ೬೯ | ದೇಗುಲದಲ್ಲಿ ದೇವನಿಲ್ಲ; ಜೀವನೇ ದೇವನು. |
| ೭೦ | ದೇಹವನ್ನರಿಯದೇ ಪ್ರಾಣವನ್ನರಿಯಲಾಗದು; ಪ್ರಾಣವನ್ನರಿಯದೇ ಮನವನ್ನರಿಯಲಾಗದು;<br>ಮನವನ್ನರಿಯದೇ ಬುದ್ಧಿಯನ್ನರಿಯಲಾಗದು; ಬುದ್ಧಿಯನ್ನರಿಯದೇ ಆತ್ಮವನ್ನರಿಯಲಾಗದು. |
| ೭೧ | ದೈವವು ಕರುಣಾಮಯಿಯೇ? ಹೌದು, ಯಾಕೆಂದರೆ ಜೀವವನ್ನು ಸೃಷ್ಟಿ ಮಾಡಿದೆಯಲ್ಲ! ಹಾಗಾದರೆ ದೈವವು ಕ್ರೂರಿಯೇ? ಹೌದು, ಯಾಕೆಂದರೆ ಜೀವವು ಮರಣಿಸುವುದಲ್ಲ! ಅಂದಮೇಲೆ, ಜೀವದ ವಿಕಾಸವಾಗಬೇಕೆಂದರೆ ದೈವವು ಭಾವನೆಗಳನ್ನು ಮೀರಿರಬೇಕಲ್ಲ! ಹೌದು, ದೈವವು ದೇಹ–ಮನಸ್ಸಿನ ಭಾವನೆಗಳನ್ನು ಮೀರಿದ ನಿತ್ಯಾತ್ಮವೇ ಆಗಿದೆಯಲ್ಲ! |
| ೭೨ | ದ್ವೈತ–ಅದ್ವೈತಗಳೆಂಬಿತ್ಯಾದಿ ತತ್ತ್ವಗಳ್ಯಾವುವೂ ಇಲ್ಲ; ಅವೆಲ್ಲವೂ ಕೇವಲ ವೈಯಕ್ತಿಕವಾದ ಮತಗಳು ಅಷ್ಟೇ. ಇರುವುದು ಅನಂತವಾದ ಬ್ರಹ್ಮತತ್ತ್ವವೊಂದೇ. |
| ೭೩ | ದ್ವೈತಿಯು ಹೇಳುತ್ತಾನೆ: ಗಾಳಿಯೇ ಬೇರೆ, ಪ್ರಾಣವೇ ಬೇರೆ. ಆದ್ದರಿಂದ ಭೇದವಿದೆ. ಅದ್ವೈತಿಯು ಹೇಳುತ್ತಾನೆ: ಗಾಳಿಯು ನಿನ್ನೊಳಗೆ ಹೋದ ಮೇಲೆ, ಪ್ರಾಣವೇ ಆಗುವುದು. ಆದ್ದರಿಂದ ಭೇದವಿಲ್ಲ. |

| | |
|---|---|
| | ದ್ವೈತಿಯು ಹೇಳುತ್ತಾನೆ: ಆಹಾರವೇ ಬೇರೆ, ನಾನೇ ಬೇರೆ. ಆದ್ದರಿಂದ ಭೇದವಿದೆ. ಅದ್ವೈತಿಯು ಹೇಳುತ್ತಾನೆ: ಆಹಾರವನ್ನು ನೀನು ಸೇವಿಸಿದ ಮೇಲೆ, ನೀನೇ ಅದಾಗುವೆ. ಆದ್ದರಿಂದ ಭೇದವಿಲ್ಲ. ದ್ವೈತಿಯು ಹೇಳುತ್ತಾನೆ: ಒಂದೇ ಮರದ ಎಲೆಗಳು ಒಂದರಂತೆ ಇನ್ನೊಂದಿಲ್ಲವಲ್ಲ? ಅದ್ವೈತಿಯು ಹೇಳುತ್ತಾನೆ: ಎಲೆಗಳು ಮರದೊಂದಿಗೆ ಸೇರಿದ್ದುಕೊಂಡು ಒಳಗೆ ಹರಿಯುವ ರಸವು ಒಂದೇ ಆಗಿದೆಯಲ್ಲ! ದ್ವೈತಿಯು ಹೇಳುತ್ತಾನೆ: ಗಂಡನೇ ಬೇರೆ, ಹೆಂಡತಿಯೇ ಬೇರೆ. ಆದ್ದರಿಂದ ಭೇದವಿದೆ. ಅದ್ವೈತಿಯು ಹೇಳುತ್ತಾನೆ: ಮದುವೆಯಾದ ಮೇಲೆ ಮನೆಯು ಒಂದೇ. ಆದ್ದರಿಂದ ಭೇದವಿಲ್ಲ. ದ್ವೈತಿಯು ಹೇಳುತ್ತಾನೆ: ಜೀವವೇ ಬೇರೆ, ದೈವವೇ ಬೇರೆ. ಆದ್ದರಿಂದ ಭೇದವಿದೆ. ಅದ್ವೈತಿಯು ಹೇಳುತ್ತಾನೆ: ದೈವವೇ ಜೀವಗಳಾಗಿ ತನ್ನ ಲೀಲೆಯಿಂದ ಉಂಟಾಗಿದೆ. ಆದ್ದರಿಂದ ಭೇದವಿಲ್ಲ. ದ್ವೈತಿಯು ಹೇಳುತ್ತಾನೆ: ಆ ಲೀಲೆಯು ನನಗೆ ಕಾಣಿಸುತ್ತಿಲ್ಲವಲ್ಲ? ಆದ್ದರಿಂದ ಅಂಥಹ ಲೀಲೆಯಿಲ್ಲ. ಅದ್ವೈತಿಯು ಹೇಳುತ್ತಾನೆ: ಲೀಲೆಯನ್ನು ಕಾಣುವಂಥಹ ಕಣ್ಣನ್ನು ಪ್ರಾಪ್ತಿ ಮಾಡಿಕೊಳ್ಳಬೇಕಲ್ಲ! |
| ೭೪ | ದ್ರಷ್ಟೃವು ತಾತ್ಕಾಲಿಕ, ದೃಶ್ಯವು ಶಾಶ್ವತ – ಇದು ವ್ಯಾವಹಾರಿಕ ಸತ್ಯ;<br>ದೃಶ್ಯವು ತಾತ್ಕಾಲಿಕ, ದ್ರಷ್ಟೃವು ಶಾಶ್ವತ – ಇದು ಪಾರಮಾರ್ಥಿಕ ಸತ್ಯ. |
| ೭೫ | ಧ್ಯಾನದ ಸಮಾಪ್ತಿಯು ಅಹಂಭಾವದ ನಾಶ : ಆ ನಂತರದ ಸ್ಥಿತಿಯು ಸುಷುಪ್ತಿ ಇಲ್ಲವೇ ಸಮಾಧಿ.<br>ಮಾಯೆಯನ್ನು ಗೆಲ್ಲದೇ ಇರುವವನಿಗೆ ಸುಷುಪ್ತಿ; ಮಾಯೆಯನ್ನು ಗೆದ್ದವನಿಗೆ ಸಮಾಧಿ.<br>ಆದ್ದರಿಂದ, ಸುಷುಪ್ತಿ ಭೋಗಿಗೆ, ಸಮಾಧಿ ಯೋಗಿಗೆ. |
| ೭೬ | ದ್ರಾಕ್ಷಿಯ ಹಣ್ಣನ್ನು ತಿಂದು ಸುಖಿಸುವುದು ಪ್ರಕೃತಿ.<br>ಅದರ ರಸವನ್ನು ಪಾನಕವಾಗಿಸಿ ಕುಡಿಯುವುದು ಸಂಸ್ಕೃತಿ.<br>ಅದನ್ನು ಕೊಳೆಯಿಸಿ ಮದ್ಯಪಾನ ಮಾಡುವುದು ವಿಕೃತಿ.<br>ನೀನು ಸಂಸ್ಕೃತನಾಗದಿದ್ದರೂ ಪರವಾಗಿಲ್ಲ, ವಿಕೃತನಾಗಬೇಡ. |
| ೭೭ | "ನಾನು" ಅನ್ನುವುದು ಇರಬೇಕು; "ನಾನೇ" ಅನ್ನುವುದು ಇರಬಾರದು. |
| ೭೮ | ನಿರ್ಗುಣದ ಸಂಕಲ್ಪದಿಂದ ಸಗುಣದ ಉತ್ಪತ್ತಿ; ಸಗುಣದಿಂದ ತ್ರಿಗುಣಗಳ ಸಹಿತವಾಗಿ ಜೀವದ ಉತ್ಪತ್ತಿ – ಇದು ಆತ್ಮವಿದ್ಯೆ ಹಾಗೂ ಮಾಯಾವಿದ್ಯೆ. ತ್ರಿಗುಣಗಳನ್ನು ನಿಯಂತ್ರಿಸಿ, ಸಗುಣವನ್ನು ತ್ಯಜಿಸಿ, ನಿರ್ಗುಣದಲ್ಲಿ ಲಯವಾಗುವುದು ಜೀವದ ಆದರ್ಶ – ಇದು ಯೋಗವಿದ್ಯೆ ಹಾಗೂ ಮೋಕ್ಷವಿದ್ಯೆ. |
| ೭೯ | ನೀನು ದೈವೀಶಕ್ತಿಯನ್ನು ನಂಬದಿದ್ದರೆ, ಅದರಿಂದ ಯಾರಿಗೇನೂ ನಷ್ಟವಿಲ್ಲ; ನಿನಗೇ ನಷ್ಟ. ನೀನು ದೈವೀಶಕ್ತಿಯನ್ನು ನಂಬಿದರೆ, ಅದರಿಂದ ಯಾರಿಗೇನೂ ಲಾಭವಿಲ್ಲ; ನಿನಗೇ ಲಾಭ. ನಿನ್ನೊಳಗೆ ಸುಪ್ತವಾಗಿರುವ ಶಕ್ತಿಯ ಅರಿವೇ ನಿನಗೆ ಇಲ್ಲದಿರುವಾಗ, ನಿನ್ನನ್ನು ಮೀರಿದ ಶಕ್ತಿಯ ಅರಿವು ನಿನಗೆ ಹೇಗೆ ತಾನೇ ಉಂಟಾದೀತು? ಮೂರ್ಖ, ಮೊದಲು ನಿನ್ನನ್ನು ನೀನು ಸರಿಯಾಗಿ ಅರಿತುಕೋ. |
| ೮೦ | ಪರಬ್ರಹ್ಮವನ್ನು ನೀನೆಂದಿಗೂ ಅರಿಯಲಾರೆ; ಇಂದ್ರಿಯಾತೀತವಾದದ್ದನ್ನು ನೀನು ಹೇಗೆ ತಾನೇ ಅರಿಯುವೆ!<br>ಬ್ರಹ್ಮವನ್ನು ನೀನು ಈಗಾಗಲೇ ಅರಿತಿರುವೆ; ಇಂದ್ರಿಯಗಳನ್ನು ಉಪಯೋಗಿಸುವ ಬ್ರಹ್ಮವು ನೀನೇ ಆಗಿರುವೆ!! |
| ೮೧ | ಪರಿಸರ, ವಂಶ, ಆಹಾರಗಳು ನಿನ್ನ ದೈಹಿಕ ಸಮಸ್ಯೆಗಳಿಗೆ ಕಾರಣ;<br>ಆರೋಗ್ಯದ ಸಮಸ್ಯೆಗಳ ನಿವಾರಣೆಯ ಹೊಣೆ ವೈದ್ಯರುಗಳದ್ದು –<br>ಎಂಬ ಭ್ರಮೆ ನಿನ್ನಲ್ಲಿರುವವರೆಗೂ, ನೀನು ಅನ್ನಮಯಕೋಶದ ರೋಗಿಯು.<br>ಗ್ರಹಚಾರ, ಗೃಹದೋಷ, ನಾಮಾಂಕಿತಗಳು ನಿನ್ನ ಕಷ್ಟಗಳಿಗೆ ಕಾರಣ;<br>ಈ ಸಮಸ್ತ ದೋಷಗಳ ಶಾಂತಿಯ ಹೊಣೆ ಜ್ಯೋತಿಷಿಗಳದ್ದು –<br>ಎಂಬ ಭ್ರಮೆ ನಿನ್ನಲ್ಲಿರುವವರೆಗೂ, ನೀನು ಪ್ರಾಣಮಯಕೋಶದ ರೋಗಿಯು.<br>ಸಾಮಾಜಿಕ ಅವ್ಯವಸ್ಥೆಗಳು ನಿನ್ನ ಸೋಲು–ನಷ್ಟಗಳಿಗೆ ಕಾರಣ; |

| | |
|---|---|
| | ಸಮಾಜವನ್ನು ವ್ಯವಸ್ಥಿತಗೊಳಿಸುವ ಹೊಣೆ ಆಡಳಿತದವರ್ಗದವರದ್ದು –<br>ಎಂಬ ಭ್ರಮೆ ನಿನ್ನಲ್ಲಿರುವವರೆಗೂ, ನೀನು ಮನೋಮಯಕೋಶದ ರೋಗಿಯು.<br>ಪೂರ್ವಜನ್ಮದ ಅಂಟು–ನಂಟುಗಳು ನಿನ್ನ ದುಃಖ–ದುಮ್ಮಾನಗಳಿಗೆ ಕಾರಣ;<br>ಕರ್ಮದೋಷಗಳ ನಾಶದ ಹೊಣೆ ಮಾಂತ್ರಿಕ–ತಾಂತ್ರಿಕರದ್ದು –<br>ಎಂಬ ಭ್ರಮೆ ನಿನ್ನಲ್ಲಿರುವವರೆಗೂ, ನೀನು ವಿಜ್ಞಾನಮಯಕೋಶದ ರೋಗಿಯು.<br>ಬದುಕಿನ ಎಲ್ಲಾ ಸುಖ–ದುಃಖಗಳಿಗೆ ದೈವನಿಯಮಗಳು ಕಾರಣ;<br>ನಿನ್ನ ಬದುಕಿನ ಶಾಂತಿ–ನೆಮ್ಮದಿಯ ಹೊಣೆ ದೈವ–ದೇವತೆಗಳದ್ದು –<br>ಎಂಬ ಭ್ರಮೆ ನಿನ್ನಲ್ಲಿರುವವರೆಗೂ, ನೀನು ಆನಂದಮಯಕೋಶದ ರೋಗಿಯು.<br>ಎಲ್ಲಿಯವರೆಗೆ ನಿನ್ನನ್ನು ಪ್ರತ್ಯೇಕಿಸುವೆಯೋ, ಅಲ್ಲಿಯವರೆಗೆ ನೀನು ಪರತಂತ್ರನು; ನೀನು ಭವರೋಗಿಯು.<br>ಆತ್ಮನೇ ನೀನೆಂದು ಅರಿತಾಗ, ನೀನು ಸರ್ವತಂತ್ರ ಸ್ವತಂತ್ರನು; ಅಂದರೆ ನೀನು ಯೋಗಿಯು.<br>ಆತ್ಮವೇ ನೀನಾದಾಗ, ನೀನು ಸಂಪೂರ್ಣವಾಗಿ ಮುಕ್ತನು ಹಾಗೂ ತ್ಯಾಗಿಯು. |
| ೮೨ | ಪಾರಮಾರ್ಥಿಕ ವಿಷಯಗಳಲ್ಲಿ – "ಏನು ಮಾಡಬೇಕು?" ಎಂದು ಕೇಳುವವನು ಉತ್ತಮನು.<br>"ಹೇಗೆ ಮಾಡಬೇಕು?" ಎಂದು ಕೇಳುವವನು ಮಧ್ಯಮನು.<br>"ಯಾಕೆ ಮಾಡಬೇಕು?" ಎಂದು ಕೇಳುವವನು ಅಧಮನು.<br>ವ್ಯಾವಹಾರಿಕ ವಿಷಯಗಳಲ್ಲಿ – "ಯಾಕೆ ಮಾಡಬೇಕು?" ಎಂದು ಕೇಳುವವನು ಉತ್ತಮನು.<br>"ಹೇಗೆ ಮಾಡಬೇಕು?" ಎಂದು ಕೇಳುವವನು ಮಧ್ಯಮನು.<br>"ಏನು ಮಾಡಬೇಕು?" ಎಂದು ಕೇಳುವವನು ಅಧಮನು. |
| ೮೩ | ಪುಸ್ತಕದಲ್ಲಿರುವ ಮಾಹಿತಿಯು ಮಸ್ತಕದಲ್ಲಿ ಆಧ್ಯಾತ್ಮಿಕ ವಿಮರ್ಶೆಗೊಳಪಟ್ಟಾಗ ಮಾತ್ರ ಅದು<br>ಸಾರ್ಥಕವಾದ ಜ್ಞಾನ; ಇಲ್ಲದಿದ್ದರೆ ಅದು ನಿರರ್ಥಕವಾದ ಮೌಢ್ಯ. |
| ೮೪ | ಪ್ರಾಣವು ಕೆಳಮುಖವಾಗಿ ಹರಿಯುತ್ತಿರುವಾಗ ಕಂದಪ್ರದೇಶದ ವಿಸ್ತಾರ – ಇದು ಭೋಗಿಯ ಶರೀರ.<br>ಪ್ರಾಣದ ಹರಿವನ್ನು ತಿರುಗಿಸಿದಾಗ ಲಿಂಗಪ್ರದೇಶದ ಆಕಾರ – ಇದು ಯೋಗಿಯ ಶರೀರ.<br>ಪ್ರಾಣವನ್ನು ಊರ್ಧ್ವಮುಖವಾಗಿಯೇ ನಿಲ್ಲಿಸಿದಾಗ ಪದ್ಮಪ್ರದೇಶದ ಪ್ರಸಾರ – ಇದು ಜ್ಞಾನಿಯ ಶರೀರ.<br>ಕಂದವಾಗಿರುವುದು ಮಾಯೆಯಿಂದ, ಲಿಂಗವಾಗಿ ಮಾಡುವುದು ಸಾಧನೆಯಿಂದ, ಪದ್ಮವಾಗಿ<br>ಪರಿವರ್ತಿಸುವುದು ವಾಸನಾಕ್ಷಯದಿಂದ. |
| ೮೫ | ಪ್ರಾಪಂಚಿಕ ಆಸಕ್ತಿಯಲ್ಲಿ ತೊಡಗಿಕೊಂಡವನು ಭೋಗಿ.<br>ಪ್ರಾಪಂಚಿಕ ವಿರಕ್ತಿಯಲ್ಲಿ ತೊಡಗಿಸಿಕೊಂಡವನು ತ್ಯಾಗಿ.<br>ಆಸಕ್ತಿ–ವಿರಕ್ತಿಗಳಲ್ಲಿ ಸಮತ್ವವನ್ನು ಬೆಳೆಸಿಕೊಂಡವನು ಯೋಗಿ. |
| ೮೬ | ಪ್ರೇಮವಿದ್ದಲ್ಲಿ ತ್ಯಾಗವಿದೆ; ಮೋಹವಿದ್ದಲ್ಲಿ ದ್ವೇಷವಿದೆ. |
| ೮೭ | ಬದುಕಿನಲ್ಲಿ ಇದ್ದುಕೊಂಡು ಬದುಕಿನ ಬಗ್ಗೆ ಕಲಿಯಲೆಂದೇ ನೀನು ಬಂದಿರುವೆ;<br>ಬದುಕನ್ನು ತ್ಯಜಿಸಿದರೆ ನೀನು ಏನನ್ನು ಕಲಿಯುವೆ? |
| ೮೮ | ಬಾಲ್ಯದಲ್ಲಿ ಆಟ, ಆಲಾಪ; ಯೌವನದಲ್ಲಿ ಮದ, ಪ್ರಲಾಪ; ವೃದ್ಧಾಪ್ಯದಲ್ಲಿ ಪಶ್ಚಾತ್ತಾಪ –<br>ಇದು ಭೋಗಿಯ ಲಕ್ಷಣ.<br>ಬಾಲ್ಯದಲ್ಲಿ ಅಧ್ಯಯನ; ಯೌವನದಲ್ಲಿ ಅಧ್ಯಾಪನ; ವೃದ್ಧಾಪ್ಯದಲ್ಲಿ ಆತ್ಮದರ್ಶನ –<br>ಇದು ಯೋಗಿಯ ಲಕ್ಷಣ. |
| ೮೯ | ಬುದ್ಧಿಗಿಂತ ಸಿದ್ಧಿ ಶ್ರೇಷ್ಠ; ಸಿದ್ಧಿಗಿಂತ ಶುದ್ಧಿ ಶ್ರೇಷ್ಠ. |
| ೯೦ | ಬುದ್ಧಿಯ ನಂತರ ಬರುವಂತಹ ಸಿದ್ಧಿಯು ವಿಕಾಸಕ್ಕೆ ಪೂರಕ; |

| | |
|---|---|
| | ಬುದ್ಧಿಗೆ ಮೊದಲೇ ಬರುವಂತಹ ಸಿದ್ಧಿಯು ವಿನಾಶಕ್ಕೆ ಪ್ರೇರಕ. |
| ೯೧ | ಬುದ್ಧಿಯ ಮೂಲಕ ಮನಸ್ಸಿನ ಲಯ;<br>ಅಹಂಕಾರದ ಮೂಲಕ ಬುದ್ಧಿಯ ಲಯ;<br>ಸಮಾಧಿಯ ಮೂಲಕ ಅಹಂಕಾರದ ಲಯ;<br>ಚಿತ್ತದ ಲಯ ಸಾಧ್ಯವಿಲ್ಲ; ಯಾಕೆಂದರೆ ಅದು ನಿನ್ನದಲ್ಲ. |
| ೯೨ | ಬುದ್ಧಿವಂತರು ಅವಿದ್ಯಾವಂತರು; ಬುದ್ಧಿಹೀನರು ವಿದ್ಯಾವಂತರು.<br>ಯಾಕೆಂದರೆ ಬುದ್ಧಿನಾಶವೇ ಸಮಾಧಿಯು; ಅದೇ ಅರಿವಿನ ವಿದ್ಯೆಯು. |
| ೯೩ | ಬೆಳೆಯನ್ನು ಬೆಳೆಯುತ್ತಿರುವ ವರೆಗೂ ಬೆಳೆಯ ಜೊತೆಗೆ ಕಳೆಯೂ ಬೆಳೆಯುತ್ತದೆ. ಆದ್ದರಿಂದ, ಬೆಳೆಯನ್ನು ಬೆಳೆಯುವ ಹಾಗೂ ಕಳೆಯನ್ನು ಕಳೆಯುವ ಪ್ರಕ್ರಿಯೆಯು ನಿರಂತರವಾಗಿ ನಡೆಯುತ್ತಿರಬೇಕು. ಇದರ ಜೊತೆಗೆ, ಯಾವುದು ಬೆಳೆ ಹಾಗೂ ಯಾವುದು ಕಳೆ ಎಂಬುದನ್ನು ನಿರ್ಧರಿಸುವ ವಿವೇಚನೆಯು ಕೂಡಾ ಇರಬೇಕು. ಕಳೆಯು ಬೆಳೆಯದಂತೆ ಮತ್ತು ಬೆಳೆಯು ಕೊಳೆಯದಂತೆ ನೋಡಿಕೊಳ್ಳುತ್ತಿರಬೇಕು. ಇಲ್ಲದಿದ್ದರೆ, ಇಳೆಯ ತುಂಬಾ ಕಳೆಯೇ ಬೆಳೆದು ಬೆಳೆಯ ತಳಿಯು ಅಳಿದುಹೋದೀತು. |
| ೯೪ | ಬ್ರಹ್ಮಚರ್ಯ, ಗಾರ್ಹಸ್ಥ್ಯ, ವಾನಪ್ರಾಸ್ಥ್ಯ, ಸನ್ಯಾಸ – ಇದು ಆಶ್ರಮಧರ್ಮ.<br>ಬಾಲ್ಯದಲ್ಲಿಯೇ ಸನ್ಯಾಸದೀಕ್ಷೆ – ಇದು ವೇದಕ್ಕೂ ಪ್ರಕೃತಿಗೂ ವಿರುದ್ಧ. |
| ೯೫ | ಬ್ರಹ್ಮಚರ್ಯದಲ್ಲಿ ಸ್ವಾಂತಿಕ ವೃತ್ತಿ; ಗಾರ್ಹಸ್ಥ್ಯದಲ್ಲಿ ಕೌಟುಂಬಿಕ ವೃತ್ತಿ; ವಾನಪ್ರಾಸ್ಥ್ಯದಲ್ಲಿ ಸಾಮಾಜಿಕ ವೃತ್ತಿ; ಸನ್ಯಾಸದಲ್ಲಿ ಆಧ್ಯಾತ್ಮಿಕ ವೃತ್ತಿ. ಇದುವೇ ಇಂದಿನ ಯುಗಕ್ಕೆ ಸಮಂಜಸವು. |
| ೯೬ | ಬ್ರಹ್ಮಜ್ಞನು ವೈಷ್ಣವನೂ ಅಲ್ಲ, ಶೈವನೂ ಅಲ್ಲ; ಬ್ರಹ್ಮಜ್ಞನು ಕೇವಲ ಬ್ರಾಹ್ಮಣನು ಮಾತ್ರ. |
| ೯೭ | ಬ್ರಹ್ಮನೆಂಬವನಿಲ್ಲ; ಬ್ರಹ್ಮವೆಂಬುದು ಮಾತ್ರ ಇದೆ. |
| ೯೮ | ಬ್ರಹ್ಮವನ್ನು ನಂಬುವವರು ಮೂರ್ಖರು; ಬ್ರಹ್ಮವನ್ನು ನಂಬದೇ ಇರುವವರು ಮಹಾಮೂರ್ಖರು. ಯಾರಾದರೂ "ನನ್ನನ್ನು ನಾನು ನಂಬುತ್ತೇನೆ" ಎನ್ನುವರೇ? ಯಾರಾದರೂ "ನನ್ನನ್ನು ನಾನು ನಂಬುವುದಿಲ್ಲ" ಎನ್ನುವರೇ? ಆತ್ಮವೇ ಬ್ರಹ್ಮಸ್ವರೂಪವಾಗಿರುವಾಗ ನಂಬುವ ಅಥವಾ ನಂಬದಿರುವ ಪ್ರಶ್ನೆಯೇ ಇಲ್ಲ! ಆತ್ಮದ ಅಸ್ತಿತ್ವದ ಬಗೆಗಿನ ಪ್ರಶ್ನೆಯೇ ಅಸಂಬದ್ಧ. ಆತ್ಮವನ್ನರಿಯಲು ಇಚ್ಛಿಸದವರು ಮನುಷ್ಯರೂಪದ ಮೃಗಗಳು. |
| ೯೯ | ಬ್ರಹ್ಮವು ಸತ್ಯ, ಜಗತ್ತು ಮಿಥ್ಯೆ : ಇದು ಶಂಕರ–ಸೂಕ್ತಿ. ಇಂದ್ರಿಯಗೋಚರವಾಗುವಂಥದು ಮಾತ್ರ ಸತ್ಯ, ಇಂದ್ರಿಯಗಳಿಗೆ ನಿಲುಕದುದೆಲ್ಲವೂ ಮಿಥ್ಯೆ : ಇದು ಚಾರ್ವಾಕ–ಉಕ್ತಿ.<br>ಮೊದಲನೆಯದು ಯೋಗಿಗಳಿಗೆ; ಎರಡನೆಯದು ಭೋಗಿಗಳಿಗೆ. |
| ೧೦೦ | ಭಕ್ತಿಯಿಲ್ಲದ ಜ್ಞಾನ ಕುಂಟು; ಜ್ಞಾನವಿಲ್ಲದ ಭಕ್ತಿ ಕುರುಡು. |
| ೧೦೧ | ಭಕ್ತಿಯು ಬಹಿರ್ಮುಖವಾಗಿರುವವರೆಗೂ ಜ್ಞಾನವು ಸಾಧ್ಯವಾಗುವುದಿಲ್ಲ; ಜ್ಞಾನವು ಸಾಧ್ಯವಾಗುವವರೆಗೂ ಭಕ್ತಿಯು ಅಂತರ್ಮುಖವಾಗುವುದಿಲ್ಲ; ಭಕ್ತಿ–ಜ್ಞಾನಗಳೆರಡೂ ಸಮನ್ವಯವಾಗಬೇಕೆಂದರೆ ಕರ್ಮದ ಸರಿಯಾದ ಅರಿವಿರಬೇಕು. |
| ೧೦೨ | ಭಗವಂತನು ಸಜೀವನೂ ಅಲ್ಲ, ನಿರ್ಜೀವನೂ ಅಲ್ಲ. ಅವನು ಆಜೀವನು. ಅವನನ್ನು ಎಲ್ಲೆಲ್ಲಿಯೋ ಹುಡುಕುವ ಬದಲು ನಿನ್ನಲ್ಲಿಯೇ ಹುಡುಕು. ನಿನ್ನ ಮೂಲವೇ ಅವನಾಗಿರುವಾಗ, ಎಲ್ಲೆಲ್ಲಿ ಹುಡುಕಿ ಯಾಕೆ ಬಳಲುವೆ? |
| ೧೦೩ | ಭವದಲ್ಲಿಯೇ ಇರುವವನು ಭೋಗಿ; ಭವವನ್ನು ಭಾವವನ್ನಾಗಿಸುವವನು ರೋಗಿ;<br>ಭಾವದಲ್ಲಿಯೇ ಇರುವವನು ತ್ಯಾಗಿ; ಭಾವವನ್ನು ಭವವನ್ನಾಗಿಸುವವನು ಯೋಗಿ. |
| ೧೦೪ | ಭಾವನೆಗಳು ಭಾಷೆಗಳಲ್ಲಿಲ್ಲ; ಭಾಷೆಗಳು ಭಾವನೆಗಳಲ್ಲಿಲ್ಲ; ಇವೆರಡರಲ್ಲಿ ಸಮನ್ವಯವನ್ನು ಸಾಧಿಸುವವನೇ ನಿಜವಾದ ಅರ್ಥದಲ್ಲಿ ಕವಿ ಅಥವಾ ಋಷಿ. ಈ ಸಮನ್ವಯವನ್ನು ಸಾಧಿಸಲು ಸಮರ್ಥವಾದ ಭಾಷೆಯ |

| | |
|---|---|
| | ಅಗತ್ಯವಿದೆ; ಅದುವೇ ಸಂಸ್ಕೃತ ಭಾಷೆ; ಯಾಕೆಂದರೆ ಇದು ಭಾವಪ್ರಾಧಾನ್ಯತೆ ಹಾಗೂ ಭಾಷಾವೈವಿಧ್ಯತೆ – ಇವೆರಡೂ ಇರುವಂಥದ್ದು. |
| ೧೦೫ | ಭಿನ್ನಾಭಿಪ್ರಾಯಗಳು ಇರಬೇಕು; ವಿರುದ್ಧಾಭಿಪ್ರಾಯಗಳು ಇರಬಾರದು. |
| ೧೦೬ | ಭುಕ್ತಿಯೆಂದರೆ ಕಳೆದುಕೊಂಡಿದ್ದನ್ನೆಲ್ಲಾ ಪಡೆದುಕೊಳ್ಳುವ ಪ್ರಯತ್ನ;<br>ಮುಕ್ತಿಯೆಂದರೆ ಪಡೆದುಕೊಂಡಿದ್ದನ್ನೆಲ್ಲಾ ಕಳೆದುಕೊಳ್ಳುವ ಪ್ರಯತ್ನ. |
| ೧೦೭ | ಭೋಗದಲ್ಲಿ ವಸ್ತುಸಂಗ್ರಹ; ಯೋಗದಲ್ಲಿ ಶಕ್ತಿಸಂಗ್ರಹ. ಭೋಗದಿಂದ ಕರ್ಮಸಂಗ್ರಹ; ಯೋಗದಿಂದ ಧರ್ಮಸಂಗ್ರಹ. ಭೋಗದಿಂದ ರೋಗ; ಯೋಗದಿಂದ ತ್ಯಾಗ. |
| ೧೦೮ | ಭೋಗಿಯು ಕೇಳುತ್ತಾನೆ: "ನೀನೇಕೆ ಹೀಗೆ?" ಯೋಗಿಯು ಕೇಳುತ್ತಾನೆ: "ನಾನೇಕೆ ಹೀಗೆ?" |
| ೧೦೯ | ಭೋಗಿಗೆ ಸಾವಿನ ಭಯ; ರೋಗಿಗೆ ಬದುಕಿನ ಭಯ; ಯೋಗಿಗೆ ಇವರಿಬ್ಬರ ಭಯ. |
| ೧೧೦ | ಭೋಗಿಗೆ ಸುಷುಪ್ತಿಯು ಅವಿದ್ಯೆ; ಯೋಗಿಗೆ ಸುಷುಪ್ತಿಯೇ ವಿದ್ಯೆ. |
| ೧೧೧ | ಭೋಗಿಯ ಬದುಕು ಜನರನ್ನು ಮೆಚ್ಚಿಸಲು; ಯೋಗಿಯ ಬದುಕು ದೈವವನ್ನು ಮೆಚ್ಚಿಸಲು. |
| ೧೧೨ | ಭೋಗಿಯು ಅರ್ಥವನ್ನು ಅನರ್ಥವನ್ನಾಗಿಸುತ್ತಾನೆ; ಯೋಗಿಯು ಅನರ್ಥದಲ್ಲಿ ಅರ್ಥವನ್ನು ಹುಡುಕುತ್ತಾನೆ. |
| ೧೧೩ | ಭೋಗಿಯು ಇತರರನ್ನು ಅರಿಯುವುದರಲ್ಲಿಯೇ ಕಾಲ ಕಳೆಯುತ್ತಾನೆ;<br>ಯೋಗಿಯು ತನ್ನನ್ನು ಅರಿಯುವುದರಲ್ಲಿಯೇ ಕಾಲ ಕಳೆಯುತ್ತಾನೆ.<br>ಆದ್ದರಿಂದ ಭೋಗಿಯು ವ್ಯಾವಹಾರಿಕ ಅರ್ಥದಲ್ಲಿ ಸ್ವಾರ್ಥಿಯು,<br>ಮತ್ತು ಯೋಗಿಯು ಆಧ್ಯಾತ್ಮಿಕ ಅರ್ಥದಲ್ಲಿ ಸ್ವಾರ್ಥಿಯು. |
| ೧೧೪ | ಭೋಗಿಯು ಚಿಂತಿಸುತ್ತಾನೆ: ಜನ ಯಾಕೆ ಹೀಗೆ?<br>ರೋಗಿಯು ಚಿಂತಿಸುತ್ತಾನೆ: ನಾನು ಯಾಕೆ ಹೀಗೆ?<br>ಯೋಗಿಯು ಚಿಂತಿಸುತ್ತಾನೆ: ನಾನು ಇರುವುದು ಹೇಗೆ?<br>ತ್ಯಾಗಿಯು ಚಿಂತಿಸುತ್ತಾನೆ: ನಾನು ಹೋಗುವುದು ಹೇಗೆ? |
| ೧೧೫ | ಮಕ್ಕಳು ಮುಗ್ಧರು ಹಾಗೂ ಮೂಢರು; ವಯಸ್ಕರು ಮುಗ್ಧರಲ್ಲ, ಆದರೆ ಮೂಢರು.<br>ಯೋಗಿಗಳು ಮೂಢರಲ್ಲ, ಆದರೆ ಮುಗ್ಧರು; ಜ್ಞಾನಿಗಳು ಮುಗ್ಧರೂ ಅಲ್ಲ, ಮೂಢರೂ ಅಲ್ಲ. |
| ೧೧೬ | ಮಕ್ಕಳು ಸತ್ಪ್ರಜೆಗಳಾಗಬೇಕೆಂದರೆ ಮೊದಲು ಸಂಸ್ಕಾರವನ್ನು ಕೊಡಿ, ಆಮೇಲೆ ಸೌಲಭ್ಯವನ್ನು ಕೊಡಿ.<br>ಮೊದಲೇ ಎಲ್ಲಾ ಸೌಲಭ್ಯವನ್ನು ಒದಗಿಸಿದರೆ, ಆಮೇಲೆ ಅವರು ಸಂಸ್ಕಾರವನ್ನು ಸಂಪಾದಿಸಲಾರರು. |
| ೧೧೭ | ಮನಸ್ಸಿನ ಕಾರ್ಯ ಚಿಂತನೆ; ಚಿತ್ತದ ಕಾರ್ಯ ಸ್ಮರಣೆ;<br>ಬುದ್ಧಿಯ ಕಾರ್ಯ ನಿಶ್ಚಯ; ಅಹಂಕಾರದ ಕಾರ್ಯ ವಿಷಯ. |
| ೧೧೮ | ಮಹರ್ಷಿ ಪತಂಜಲಿಯಿಂದ ಯೋಗವಿದ್ಯೆ;<br>ಬ್ರಹ್ಮರ್ಷಿ ವೇದವ್ಯಾಸನಿಂದ ಬ್ರಹ್ಮವಿದ್ಯೆ;<br>ಆದಿ ಶಂಕರಾಚಾರ್ಯನಿಂದ ತಂತ್ರವಿದ್ಯೆ.<br>ಮೊದಲನೆಯದು ಜೀವವನ್ನು ಅರಿಯಲು;<br>ಎರಡನೆಯದು ದೈವವನ್ನು ಅರಿಯಲು;<br>ಮೂರನೆಯದು ತನ್ನನ್ನು ತಾನೇ ಅರಿಯಲು. |
| ೧೧೯ | ಮಾಂಸಾಹಾರ ಸೇವಿಸುವವರು ಬೇತಾಳರು. ಹೆಣವನ್ನು ತಿನ್ನುವವರನ್ನು ಏನೆನ್ನಬೇಕು?<br>ಮದ್ಯಪಾನ ಮಾಡುವವರು ಪಿಶಾಚಿಗಳು. ಕೊಳೆತದ್ದನ್ನು ಕುಡಿಯುವವರನ್ನು ಏನೆನ್ನಬೇಕು? |
| ೧೨೦ | ಮಾಯೆಯು ಮುಗ್ಧಜೀವಿಯನ್ನು ಬದ್ಧಜೀವಿಯನ್ನಾಗಿಸುವುದು;<br>ಜ್ಞಾನವು ಬದ್ಧಜೀವಿಯನ್ನು ಬುದ್ಧಿಜೀವಿಯನ್ನಾಗಿಸುವುದು. |

| | |
|---|---|
| ೧೨೧ | ಮುಕ್ತಿ ಎಂಬುದು ಎಂದೋ ಯಾವಾಗಲೋ ಹೊಂದುವಂಥಹ ಸ್ಥಿತಿಯಲ್ಲ;<br>ಮುಕ್ತಿ ಎಂಬುದು ಇಂದೇ ಈಗಲೇ ನಿರ್ಲಿಪ್ತವಾಗಿ ಇರುವಂಥಹ ಸ್ಥಿತಿ. |
| ೧೨೨ | ಮುಕ್ತಿಗಾಗಿ ಮಾಡುವ ಎಲ್ಲಾ ಪ್ರಯತ್ನಗಳು ವ್ಯರ್ಥ; ಪ್ರಯತ್ನರಾಹಿತ್ಯವೇ ಮುಕ್ತಿ. |
| ೧೨೩ | ಮುಮುಕ್ಷುವಾದವನು ಮೋಕ್ಷವೆಂದರೆ "ಏನು" ಮತ್ತು ಮೋಕ್ಷವು "ಯಾಕೆ" ಎಂಬುದನ್ನು ತಿಳಿದಿದ್ದರೆ ಸಾಕು; ಮೋಕ್ಷವು "ಹೇಗೆ" ಸಂಭವಿಸುತ್ತದೆ ಎಂಬುದನ್ನು ತಿಳಿಯುವ ಅಗತ್ಯವಿಲ್ಲ – ಅವನಿಗೆ ಜ್ಞಾನದಿಂದಲೇ ಮೋಕ್ಷ. ಆದರೆ ತಾಂತ್ರಿಕ ಯೋಗಿಯಾದವನು ಮೋಕ್ಷವು "ಹೇಗೆ" ಸಂಭವಿಸುತ್ತದೆ ಎಂಬುದನ್ನು ಕೂಡಾ ಅರಿಯಲು ಬಯಸುತ್ತಾನೆ – ಅವನಿಗೆ ಭಕ್ತಿಯಿಂದಲೇ ಮೋಕ್ಷ. ನದಿಯು ತನ್ನಿಂದ ತಾನೇ ಹರಿದು ಸಾಗರವನ್ನು ಸೇರಿದರೆ ಅದು ಜ್ಞಾನದಿಂದ ಮೋಕ್ಷ. ನದಿಯು ತಾನಾಗಿ ತಾನೇ ಹರಿದು ಸಾಗರವನ್ನು ಸೇರಿದರೆ ಅದು ಭಕ್ತಿಯಿಂದ ಮೋಕ್ಷ. ಜ್ಞಾನವು ವಿರಕ್ತಿಯ ಮಾರ್ಗ ಹಾಗೂ ಭಕ್ತಿಯು ಆಸಕ್ತಿಯ ಮಾರ್ಗ. ಜ್ಞಾನವು ಆಕರ್ಷಣೆ ಹಾಗೂ ಭಕ್ತಿಯು ಸಮರ್ಪಣೆ. ಜ್ಞಾನ–ಭಕ್ತಿಗಳೆರಡನ್ನೂ, ಅಂದರೆ ವಿರಕ್ತಿ–ಆಸಕ್ತಿಗಳೆರಡನ್ನೂ, ಜೀವನದಲ್ಲಿ ಅಳವಡಿಸಿಕೊಳ್ಳುವುದೇ ಕರ್ಮಯೋಗ. |
| ೧೨೪ | ಮೂರ್ತಿಯು ಕೇವಲ ಧಾರಣಕ್ಕೆ ದ್ಯೋತಕವಷ್ಟೇ. ಅದರಲ್ಲಿ ಯಾವ ದೈವೀಶಕ್ತಿಯೂ ಇಲ್ಲ. ಶಕ್ತಿಯು ಸಜೀವ ಚೈತನ್ಯವಾಗಿ ನಿನ್ನಲ್ಲೇ ಇರುವಾಗ, ನಿರ್ಜೀವ ಜಡವಸ್ತುಗಳನ್ನು ಪೂಜಿಸುವ ಮೌಢ್ಯವೇಕೆ? |
| ೧೨೫ | ಮೂಢನಲ್ಲಿರುವುದು ದೇಹಭಾವ; ಮೂರ್ಖನಲ್ಲಿರುವುದು ಅಹಂಭಾವ;<br>ಯೋಗಿಯಲ್ಲಿರುವುದು ಜೀವಭಾವ; ಋಷಿಯಲ್ಲಿರುವುದು ಬ್ರಹ್ಮಭಾವ. |
| ೧೨೬ | ಮೃಗಕ್ಕಿಂತ ಮೇಲಾಗಬೇಕೆಂದರೆ ಮಾಂಸಾಹಾರವನ್ನು ಬಿಡಬೇಕು.<br>ಮೃಗಕ್ಕಿಂತ ಕೀಳಾಗಬೇಕೆಂದರೆ ಮದ್ಯಪಾನವನ್ನು ಮಾಡಬೇಕು. |
| ೧೨೭ | ಮೊದಲು ಅನ್ನಬ್ರಹ್ಮ; ಆಮೇಲೆ ಪರಬ್ರಹ್ಮ. ಮೊದಲು ಆರೋಗ್ಯ, ನಂತರ ಅಧ್ಯಾತ್ಮ;<br>ಮೊದಲು ದೇಹದ ಅರಿವು, ನಂತರ ದೇಶದ ಅರಿವು. |
| ೧೨೮ | ಮೊದಲು ಅರಿಯಬೇಕಾದುದನ್ನು ಮೊದಲೇ ಕಲಿತು ನಂತರ ಅರಿಯುವಂಥದ್ದನ್ನು ನಂತರ ಕಲಿಯಲು ಪ್ರಯತ್ನಿಸುವುದು ನಿನ್ನ ಹೆಚ್ಚುಗಾರಿಕೆ. ನಂತರ ಅರಿಯಬೇಕಾದುದನ್ನು ಮೊದಲೇ ಕಲಿತು ಮೊದಲು ಅರಿಯುವಂಥದ್ದನ್ನು ನಂತರ ಕಲಿಯಲು ಪ್ರಾರಂಭಿಸುವುದು ನಿನ್ನ ಹುಚ್ಚುಗಾರಿಕೆ. |
| ೧೨೯ | ಮೊದಲು ಆರೋಗ್ಯ, ನಂತರ ಆತ್ಮಜ್ಞಾನ, ಆನಂತರ ಹಣ – ಇದು ಪುರಾತನ ವಿದ್ಯಾಭ್ಯಾಸದ ಪದ್ಧತಿ.<br>ಮೊದಲು ಹಣ, ನಂತರ ಆರೋಗ್ಯ, ಆನಂತರ ಆತ್ಮಜ್ಞಾನ – ಇದು ಆಧುನಿಕ ವಿದ್ಯಾಭ್ಯಾಸದ ವಿಕೃತಿ. |
| ೧೩೦ | ಯಜ್ಞಗಳಲ್ಲೆಲ್ಲಾ ಶ್ರೇಷ್ಠವಾದುದು ಜ್ಞಾನಯಜ್ಞ; ಯೋಗಗಳಲ್ಲೆಲ್ಲಾ ಶ್ರೇಷ್ಠವಾದುದು ಕರ್ಮಯೋಗ. |
| ೧೩೧ | ಯಾವುದು ಅಗೋಚರವೋ ಅದು ಶಾಶ್ವತ. ಯಾವುದು ಗೋಚರವೋ ಅದು ಅಶಾಶ್ವತ. |
| ೧೩೨ | ಯಾವುದರ ಬಗ್ಗೆ ನಿನಗೆ ಅರಿವಿಲ್ಲವೋ ಅದನ್ನು ಅಲ್ಲಗಳೆಯುವ ಯೋಗ್ಯತೆಯೂ ನಿನಗಿಲ್ಲ.<br>ಮೊದಲು ಸರಿಯಾಗಿ ಅರಿತುಕೋ; ಆಮೇಲೆ ಅದರ ಬಗ್ಗೆ ಮಾತನಾಡು. |
| ೧೩೩ | ಯೋಗದಲ್ಲಿ ವ್ಯಕ್ತಿಪೂಜೆಯು ಸರ್ವಥಾ ನಿಷಿದ್ಧ; ಆಂತರಿಕವಾದ ಶಕ್ತಿಯ ಪೂಜೆಯೇ ನಿಜವಾದ ಪೂಜೆ.<br>ವ್ಯಕ್ತಿಪೂಜೆಯು ಅಧಮ; ಮೂರ್ತಿಪೂಜೆಯು ಮಧ್ಯಮ; ಶಕ್ತಿಪೂಜೆಯು ಉತ್ತಮ. |
| ೧೩೪ | ಯೋಗಿಯ ದೇಹದಲ್ಲಿ ಮಲವಿಸರ್ಜನೆಗಿಂತ ಮೂತ್ರವಿಸರ್ಜನೆ ಜಾಸ್ತಿ;<br>ಭೋಗಿಯ ದೇಹದಲ್ಲಿ ಮೂತ್ರವಿಸರ್ಜನೆಗಿಂತ ಮಲವಿಸರ್ಜನೆ ಜಾಸ್ತಿ. ಯಾಕೆಂದರೆ, ಯೋಗಿಯ ಊಟದಲ್ಲಿ ದ್ರವಾಹಾರ ಜಾಸ್ತಿ, ಮತ್ತು ಭೋಗಿಯ ಊಟದಲ್ಲಿ ಘನಾಹಾರ ಜಾಸ್ತಿ. |
| ೧೩೫ | ಯೋಗಿಯು ಕ್ರಮಿಸಬಲ್ಲ ಅತ್ಯಂತ ದೂರದ ಪ್ರಯಾಣವು ಕೇವಲ ದಶ ಅಂಗುಲ – ಸಹಸ್ರಾರದಿಂದ ವ್ಯೋಮಕ್ಕೆ. ಇದಕ್ಕೆ ಹೋಲಿಸಿದರೆ ಇನ್ನುಳಿದ ಪ್ರಯಾಣಗಳೆಲ್ಲಾ ತುಂಬಾ ಹತ್ತಿರ. |
| ೧೩೬ | ಯೋಗವು ವೈಯಕ್ತಿಕ ಅಹಂಕಾರವನ್ನು ಕಳೆದುಕೊಳ್ಳುವ ಪ್ರಯತ್ನ; ಜ್ಞಾನವು ದೈವಿಕ ಅಹಂಕಾರವನ್ನು |

| | |
|---|---|
| | ಹೊಂದುವ ಪ್ರಯತ್ನ. ಎಲ್ಲಿ ಯೋಗವು ಪರಿಸಮಾಪ್ತಿಯಾಗುತ್ತದೋ ಅಲ್ಲಿ ಜ್ಞಾನವು ಪ್ರಾರಂಭವಾಗುತ್ತದೆ.<br>ಆದ್ದರಿಂದ ಯೋಗವಿಲ್ಲದೆಯೇ ಜ್ಞಾನವಿಲ್ಲ, ಹಾಗೂ ಯೋಗವಿಲ್ಲದುದು ಜ್ಞಾನವಲ್ಲ. |
| ೧೩೭ | ಲೌಕಿಕದಲ್ಲಿ ಸಲ್ಲುವಂಥದ್ದು ಪಾರಮಾರ್ಥಿಕದಲ್ಲಿ ಅಸಂಬದ್ಧ.<br>ಪಾರಮಾರ್ಥಿಕದಲ್ಲಿ ಸಲ್ಲುವಂಥದ್ದು ಲೌಕಿಕದಲ್ಲಿ ಅಸಂಬದ್ಧ. |
| ೧೩೮ | ವಯಸ್ಸು ಜಾಸ್ತಿಯಾದಂತೆ ಆಯುಸ್ಸು ಕಡಿಮೆಯಾಗುತ್ತದೆ.<br>ಆದ್ದರಿಂದ ಜನ್ಮದಿನದಂದು ನಗಬೇಡ, ಅಳು. |
| ೧೩೯ | ವಿಚಾರವಂತರು ತಾಳ್ಮೆಯಿಂದ ಆಲಿಸಬೇಕು:<br>ಗೌತಮ ಬುದ್ಧನೆಂದ – ಮನೋಲಯವಾದಾಗ ಎಲ್ಲವೂ ಶೂನ್ಯ;<br>ಆದಿ ಶಂಕರನೆಂದ – ಮನೋಲಯವಾದಾಗ ಎಲ್ಲವೂ ಪೂರ್ಣ.<br>ಗೌತಮ ಬುದ್ಧನೆಂದ – ಮನೋಲಯವಾದಲ್ಲಿ ಏನೂ ಎಲ್ಲ, ಎಲ್ಲಾ ಸುಖ–ದುಃಖಗಳಿಗೆ ಮನಸ್ಸೇ ಕಾರಣವು;<br>ಆದಿ ಶಂಕರನೆಂದ – ಮನೋಲಯವಾದಲ್ಲಿ ಎಲ್ಲವೂ ಇದೆ, ಹಾಗೂ ಅದರಿಂದ ಎಲ್ಲವೂ ಹುಟ್ಟಿದೆ, ಮನಸ್ಸು ಕೂಡಾ.<br>ಗೌತಮ ಬುದ್ಧನೆಂದ – ಬದುಕು ದುಃಖಮಯವು;<br>ಆದಿ ಶಂಕರನೆಂದ – ಬದುಕಿನ ಮೂಲವು ಆನಂದಮಯವು.<br>ಗೌತಮ ಬುದ್ಧನೆಂದ – ಸಂಸಾರವನ್ನು ತೊರೆಯಿರಿ, ಮತ್ತು ಸಂಘವನ್ನು ಸೇರಿರಿ;<br>ಆದಿ ಶಂಕರನೆಂದ – ಸಾಧನ ಚತುಷ್ಟಯದಿಂದ ಶುದ್ಧರಾಗಿರಿ, ಮತ್ತು ಬ್ರಹ್ಮವನ್ನರಿತು ಧನ್ಯರಾಗಿರಿ.<br>ಗೌತಮ ಬುದ್ಧನು ದೈವದ ಬಗೆಗೆ ಏನನ್ನೂ ಹೇಳಲಿಲ್ಲ;<br>ಆದಿ ಶಂಕರನು ದೈವದ ಹೊರತಾಗಿ ಇನ್ನೇನನ್ನೂ ಹೇಳಲಿಲ್ಲ.<br>ಗೌತಮ ಬುದ್ಧನಿಂದಾಗಿ ಭಕ್ತಿಯು ಅನರ್ಥವಾಯಿತು;<br>ಆದಿ ಶಂಕರನಿಂದಾಗಿ ಭಕ್ತಿಯು ಸಾರ್ಥಕವಾಯಿತು, ಪರಮತತ್ತ್ವದ ಶೋಧನೆಯಾಯಿತು, ಜೀವನದ ಸಾಫಲ್ಯವಾಯಿತು. ಆದ್ದರಿಂದ ತಾತ್ತ್ವಿಕರು ಆದಿ ಶಂಕರನಿಂದ ಪ್ರೇರಣೆಯನ್ನು ಹೊಂದಿ, ಶುದ್ಧತತ್ತ್ವವನ್ನು ತಾರ್ಕಿಕವಾಗಿ ಅರಿತು ಜ್ಞಾನಿಗಳಾಗಬೇಕು, ಹಾಗೂ ನಂತರ ಈ ಶುದ್ಧಜ್ಞಾನವನ್ನು ಶುದ್ಧಭಕ್ತಿಯಿಂದ ಪರಿಪಾಲಿಸಬೇಕು. ಹೀಗಿಲ್ಲದಿದ್ದರೆ ಜೀವನಪೂರ್ತಿ ಗೊಂದಲದಲ್ಲಿಯೇ ಕಳೆಯಬೇಕು. ಆಯ್ಕೆಯು ಅವರವರದು. |
| ೧೪೦ | ವಿದ್ಯೆಯು ಇರುವುದು ಒಂದೇ; ಅದು ವೇದವಿದ್ಯೆ ಅಥವಾ ಬ್ರಹ್ಮವಿದ್ಯೆ.<br>ಉಳಿದ ವಿದ್ಯೆಗಳೆಲ್ಲವೂ ಇದರ ಶಾಖೆಗಳು, ಅಷ್ಟೇ. |
| ೧೪೧ | ವಿನಯ, ವಿಶ್ವಾಸಗಳಿಲ್ಲದವನು ವಿದ್ಯಾರ್ಥಿಯಲ್ಲ;<br>ವಿಚಾರ, ವಿವೇಕಗಳಿಲ್ಲದವನು ವಿಜ್ಞಾನಿಯಲ್ಲ. |
| ೧೪೨ | ವಿಶ್ವವನ್ನು ಬ್ರಹ್ಮವು ವ್ಯಾಪಿಸಿಕೊಂಡಿರುವುದು ಸತ್ಯ;<br>ಬ್ರಹ್ಮವಿಲ್ಲವೆಂದು ಬಗೆಯುವುದು ಅಸತ್ಯ.<br>ಸೃಷ್ಟಿಯಾಗಿರುವುದೆಲ್ಲವೂ ಋತ;<br>ಸೃಷ್ಟಿಯಾಗಿಲ್ಲದಿರುವುದೆಲ್ಲವೂ ಅನೃತ.<br>ಋತವನ್ನು ಸತ್ಯವೆಂದು ಭ್ರಮಿಸಿಕೊಂಡಿರುವುದು ಮಿಥ್ಯಾ. |
| ೧೪೩ | "ವಿಷಯರಹಿತವಾದ ಮನಸ್ಥಿತಿಯೇ ಧ್ಯಾನ." अभेददर्शनं ज्ञानं ध्यानं निर्विषयं मनः ।<br>ಇದು ಮೈತ್ರೇಯೀ ಉಪನಿಷತ್ತಿನ ಹೇಳಿಕೆ ಹಾಗೂ ಧ್ಯಾನದ ನಿರೂಪಣೆ. |

| | |
|---|---|
| | ಧ್ಯಾನದ ಬಗ್ಗೆ ಇದಕ್ಕಿಂತ ಹೆಚ್ಚಾಗಿ ಇನ್ನೇನೂ ಹೇಳುವ ಅಗತ್ಯವಿಲ್ಲ. |
| ೧೪೪ | ವೈದಿಕವಾಗಿ ದೈವವು ಅಖಂಡವಾದ ಬ್ರಹ್ಮವೊಂದೇ; ಪೌರಾಣಿಕವಾಗಿ ಮೂವರು ಇದರ ಪ್ರತೀಕವಾದವರು.<br>ಬ್ರಹ್ಮ : ಸೃಷ್ಟಿ, ಭಕ್ತಿಯೋಗ, ಬಾಂಧವ್ಯ<br>ವಿಷ್ಣು : ಸ್ಥಿತಿ, ಕರ್ಮಯೋಗ, ನೈರ್ಲಿಪ್ತ್ಯ<br>ಶಿವ : ಲಯ, ಜ್ಞಾನಯೋಗ, ವೈರಾಗ್ಯ |
| ೧೪೫ | ವೈಯಕ್ತಿಕ ಅಹಂಕಾರವು ಪ್ರಾಕೃತಿಕ ಅಹಂಕಾರದಲ್ಲಿ ಬೆರೆತು ಹೋದಾಗ ಸವಿಕಲ್ಪ ಸಮಾಧಿ. ಪ್ರಾಕೃತಿಕ ಅಹಂಕಾರವು ದೈವಿಕ ಅಹಂಕಾರದಲ್ಲಿ ಬೆರೆತು ಹೋದಾಗ ನಿರ್ವಿಕಲ್ಪ ಸಮಾಧಿ. |
| ೧೪೬ | ವ್ಯವಹಾರಕ್ಕೆ ಗ್ರಾಹ್ಯವಾದುದು ಪರಮಾರ್ಥಕ್ಕೆ ತ್ಯಾಜ್ಯ.<br>ಪರಮಾರ್ಥಕ್ಕೆ ಗ್ರಾಹ್ಯವಾದುದು ವ್ಯವಹಾರಕ್ಕೆ ತ್ಯಾಜ್ಯ. |
| ೧೪೭ | ವ್ಯಾವಹಾರಿಕ (ಅಂದರೆ ಮನುಷ್ಯನಿರ್ಮಿತ) ಜೀವನದಲ್ಲಿ, ಕಳೆದುಕೊಂಡದ್ದನ್ನು ಪಡೆದುಕೊಳ್ಳುವ ಪ್ರಯತ್ನ; ಆಧ್ಯಾತ್ಮಿಕ (ಅಂದರೆ ದೈವನಿರ್ಮಿತ) ಜೀವನದಲ್ಲಿ, ಪಡೆದುಕೊಂಡದ್ದನ್ನು ಕಳೆದುಕೊಳ್ಳುವ ಪ್ರಯತ್ನ.<br>ಅದರಲ್ಲಿ ಕರ್ಮಫಲಭೋಗ, ಇದರಲ್ಲಿ ಕರ್ಮಫಲತ್ಯಾಗ. |
| ೧೪೮ | ವ್ಯಾವಹಾರಿಕ ಪ್ರಪಂಚದಲ್ಲಿ: ಹೊಸತನ್ನು ಕಲಿಯುತ್ತಿರುವವರು ಜ್ಞಾನಿಗಳು; ಹೊಸತನ್ನು ಕಲಿಯಲೆತ್ನಿಸದವರು ಅಜ್ಞಾನಿಗಳು.<br>ಪಾರಮಾರ್ಥಿಕ ಪ್ರಪಂಚದಲ್ಲಿ: ಹೊಸತನ್ನು ಕಲಿಯುತ್ತಿರುವವರು ಅಜ್ಞಾನಿಗಳು; ಹೊಸತನ್ನು ಕಲಿಯಲೆತ್ನಿಸದವರು ಜ್ಞಾನಿಗಳು. |
| ೧೪೯ | ವ್ಯಾಸನು ಜಗತ್ತಿನ ಸರ್ವಶ್ರೇಷ್ಠ ತತ್ತ್ವಜ್ಞಾನಿ.<br>ಪತಂಜಲಿಯು ಜಗತ್ತಿನ ಸರ್ವಶ್ರೇಷ್ಠ ಅನ್ವೇಷಕ.<br>ಶಂಕರನು ಜಗತ್ತಿನ ಸರ್ವಶ್ರೇಷ್ಠ ಗುರು. |
| ೧೫೦ | ಶಂಕರನೆಂದ: ನದಿಗಳೆಂಬವು ಇಲ್ಲ, ಸಾಗರವೆಂಬುದು ಇಲ್ಲ, ಜಲವು ಮಾತ್ರವಿದೆ. ಜಲವೇ ಸ್ಥಿತ್ಯಂತರ ಭೇದದಿಂದ ನದಿ-ಸಾಗರಗಳಾಗಿದೆ.<br>ರಾಮಾನುಜನೆಂದ: ನದಿಗಳೆಲ್ಲವೂ ಸಾಗರದಿಂದಲೇ ಉಂಟಾಗಿವೆ. ಮರಳಿ ಸಾಗರವನ್ನು ಸೇರುವುದೊಂದೇ ಅವುಗಳ ಹರಿವಿನ ನಿಜವಾದ ಉದ್ದೇಶವಾಗಿದೆ.<br>ಮಧ್ವನೆಂದ: ನದಿಗಳಿಗೆ ಸಾಗರದ ಅರಿವಾಗದಿರುವ ವರೆಗೂ ಅವು ಪ್ರತ್ಯೇಕವೇ. ಸತತವಾಗಿ ಹರಿಯುವ ಪ್ರಯತ್ನದಿಂದ ಮಾತ್ರ ಅವು ಸಾಗರವನ್ನು ಸೇರಬಲ್ಲವು.<br>ಶಂಕರ : ಅದ್ವೈತ – ಜ್ಞಾನಯೋಗ : ಸತ್ತ್ವಗುಣಿಗಳಿಗೆ (ಅಜ್ಞಾನಿ, ನಿರಹಂಕಾರಿ ಹಾಗೂ ನಿರಾಲಸಿ – ಉತ್ತಮಾಧಿಕಾರಿ).<br>ರಾಮಾನುಜ : ವಿಶಿಷ್ಟಾದ್ವೈತ – ಭಕ್ತಿಯೋಗ : ರಜೋಗುಣಿಗಳಿಗೆ (ಅಜ್ಞಾನಿ, ಅಹಂಕಾರಿ ಹಾಗೂ ನಿರಾಲಸಿ – ಮಧ್ಯಮಾಧಿಕಾರಿ).<br>ಮಧ್ವ : ದ್ವೈತ – ಕರ್ಮಯೋಗ : ತಮೋಗುಣಿಗಳಿಗೆ (ಅಜ್ಞಾನಿ, ಅಹಂಕಾರಿ ಹಾಗೂ ಆಲಸಿ – ಮಂದಾಧಿಕಾರಿ).<br>ಆಯಾಯಾ ಕಾಲಘಟ್ಟಕ್ಕೆ ಅನುಗುಣವಾಗಿ, ಆಯಾಯಾ ಸಂಸ್ಕಾರವುಳ್ಳ ಜನರಿಗಾಗಿ, ಆಯಾಯಾ ಯೋಗದ ಕ್ರಮಗಳು. ಗುರಿಯೊಂದೇ, ತಲುಪುವ ವಿಧಾನಗಳು ಬೇರೆ. ತತ್ತ್ವವೊಂದೇ, ಅರಿಯುವ ಮಾರ್ಗಗಳು ಬೇರೆ. |
| ೧೫೧ | ಶಕ್ತಿಯಲ್ಲಿ ವಸ್ತುವಿದೆ; ವಸ್ತುವಿನಲ್ಲಿ ಶಕ್ತಿಯಿದೆ; ಎರಡರಲ್ಲೂ ಬ್ರಹ್ಮವಿದೆ. |
| ೧೫೨ | ಶುದ್ಧತತ್ತ್ವವನ್ನರಿತವರು "ನಿಮ್ಮಂತೆ ನೀವಾಗಿ" ಎನ್ನುವರು;<br>ಇದನ್ನರಿಯದವರು "ನಮ್ಮಂತೆ ನೀವಾಗಿ" ಎನ್ನುವರು. |

| | |
|---|---|
| ೧೫೩ | ಶೂನ್ಯದಿಂದ ಪಂಚಭೂತಗಳನ್ನು ಸೃಷ್ಟಿಸಿ, ಅವುಗಳ ನಡುವಿನ ಸಂಬಂಧಗಳ ಕ್ರಿಯೆಗಳಲ್ಲಿ<br>ತೊಡಗಿಕೊಂಡಿರುವುದು – ದೈವದ ಅಹಂಕಾರ, ಪ್ರಾಕೃತಿಕ ಬುದ್ಧಿ ಹಾಗೂ ವೈಶ್ವಿಕ ಮನಸ್ಸು.<br>ಪಂಚಭೂತಗಳಿಂದ ಜೀವಗಳನ್ನು ಸೃಷ್ಟಿಸಿ, ಇಂದ್ರಿಯ–ಶರೀರಗಳ ವಿಕಾಸದ ಕ್ರಿಯೆಗಳಲ್ಲಿ<br>ತೊಡಗಿಕೊಂಡಿರುವುದು – ಶಕ್ತಿಯ ಅಹಂಕಾರ, ಜೈವಿಕ ಬುದ್ಧಿ ಹಾಗೂ ಪ್ರಾಕೃತಿಕ ಮನಸ್ಸು.<br>ತಾನು ಶರೀರವೆಂದೆಣಿಸಿಕೊಂಡು, ಇಂದ್ರಿಯಗಳು ಹಾಗೂ ಅಂಗಾಂಗಗಳ ಕ್ರಿಯೆಗಳಲ್ಲಿ<br>ತೊಡಗಿಕೊಂಡಿರುವುದು – ಜೀವದ ಅಹಂಕಾರ, ವ್ಯಾವಹಾರಿಕ ಬುದ್ಧಿ ಹಾಗೂ ವೈಯಕ್ತಿಕ ಮನಸ್ಸು.<br>ಅಹಂಕಾರದ ಮೂರು ಸ್ತರಗಳಲ್ಲಿ ಮೂರು ರೀತಿಯ ಸ್ಮೃತಿಗಳು, ಮೂರು ರೀತಿಯ ಬುದ್ಧಿಗಳು ಹಾಗೂ<br>ಮೂರು ರೀತಿಯ ಮನಸ್ಸುಗಳು. ಆದ್ದರಿಂದ ಮೂರು ರೀತಿಯ ಕ್ರಿಯೆಗಳು – ಮೊದಲನೆಯದು ಸ್ಪಂದ,<br>ಎರಡನೆಯದು ಲೀಲೆ, ಹಾಗೂ ಮೂರನೆಯದು ಕರ್ಮ.<br>ಆದರೆ ಚಿತ್ತವು ಒಂದೇ; ಯಾಕೆಂದರೆ ಚಿತ್ ಒಂದೇ. |
| ೧೫೪ | ಶೈಶವದಿಂದ ಯೌವನದ ವರೆಗೂ ದೇಹವು ಆಂತರಿಕವಾಗಿ ಬೆಳೆಯುತ್ತದೆ.<br>ಆನಂತರ ಮರಣದ ವರೆಗೂ ದೇಹವು ಆಂತರಿಕವಾಗಿ ಕೊಳೆಯುತ್ತದೆ.<br>ಅದನ್ನು ಕೊಳೆಯಲು ಬಿಡುವವನು ರೋಗಿಯು. ಅದನ್ನು ಕೊಳೆಯದಂತೆ ಇಡುವವನು ಯೋಗಿಯು. |
| ೧೫೫ | ಸಂಪೂರ್ಣವಾಗಿ ಆತ್ಮದರ್ಶನವಾದ ವಿರಾಗಿ ಹಾಗೂ ಏನೂ ಆತ್ಮಜ್ಞಾನವಿಲ್ಲದ ಭಿಕಾರಿ – ಇವರಿಬ್ಬರೂ<br>ಬಾಹ್ಯ ಪ್ರಪಂಚಕ್ಕೆ, ಒಂದೇ ತರಹ ಕಾಣಿಸುವವರು. ಯಾವುದೇ ಜವಾಬ್ದಾರಿಗಳಿಲ್ಲ; ಆದ್ದರಿಂದ ಯಾವುದೇ<br>ಕರ್ಮಗಳಿಲ್ಲ. ಆದರೆ ಆಂತರಿಕವಾಗಿ – ಒಬ್ಬನು ಸುಜ್ಞಾನಿಯು, ಮತ್ತೊಬ್ಬನು ಅಜ್ಞಾನಿಯು. ಒಬ್ಬನು<br>ಮುಕ್ತ ಮತ್ತು ಕರ್ಮದಿಂದ ತ್ಯಕ್ತ; ಮತ್ತೊಬ್ಬನು ಮೂಢ ಮತ್ತು ಕರ್ಮಕ್ಕೆ ಬದ್ಧ. ಆದ್ದರಿಂದ, ದೇಹತ್ಯಾಗದ<br>ನಂತರ – ಒಬ್ಬನಿಗೆ ಬ್ರಹ್ಮಪ್ರಾಪ್ತಿ; ಮತ್ತೊಬ್ಬನಿಗೆ ಜನ್ಮಪ್ರಾಪ್ತಿ. |
| ೧೫೬ | ಸಂಸಾರದ ನೀತಿಗಳು ವ್ಯವಹಾರದಲ್ಲಿ ಸಲ್ಲದು; ವ್ಯವಹಾರದ ನೀತಿಗಳು ಸಂಸಾರದಲ್ಲಿ ಸಲ್ಲದು.<br>ವ್ಯಾಪಾರಿ–ಗ್ರಾಹಕರ ನಡುವೆ ಸಂಸಾರ ಸಲ್ಲದು; ತಂದೆ–ಮಕ್ಕಳ ನಡುವೆ ವ್ಯವಹಾರ ಸಲ್ಲದು.<br>ವಿಟ–ವೇಶ್ಯೆಯರ ನಡುವೆ ಸಂಸಾರ ಸಲ್ಲದು; ಪತಿ–ಪತ್ನಿಯರ ನಡುವೆ ವ್ಯವಹಾರ ಸಲ್ಲದು. |
| ೧೫೭ | ಸಂಸಾರವನ್ನು ತ್ಯಜಿಸಿದ ಸನ್ಯಾಸಿಗಿಂತ ಸಂಸಾರದಲ್ಲಿರುವ ಸನ್ಯಾಸಿಯು ಶ್ರೇಷ್ಠನು;<br>ಜ್ಞಾನಯೋಗಿಗಿಂತ ಕರ್ಮಯೋಗಿಯು ಶ್ರೇಷ್ಠನು. |
| ೧೫೮ | ಸಂಸ್ಕೃತವನ್ನು ಕಲಿಯದೇ ಅಧ್ಯಾತ್ಮವನ್ನು ಅರಿಯುವುದೆಂದರೆ – ರಾಗವನ್ನು ಕಲಿಯದೇ ಸಂಗೀತವನ್ನು<br>ಅರಿತಂತೆ, ಮುದ್ರೆಯನ್ನು ಕಲಿಯದೇ ನೃತ್ಯವನ್ನು ಅರಿತಂತೆ, ಗಣಿತವನ್ನು ಕಲಿಯದೇ ವಿಜ್ಞಾನವನ್ನು<br>ಅರಿತಂತೆ; ತಿಳಿಯದೆಯೂ ತಿಳಿದಂತೆ ನಟಿಸುವ ಮೂರ್ಖರ ಸಂತೆ. |
| ೧೫೯ | ಸತ್ಯವನ್ನು ನಿರ್ದಾಕ್ಷಿಣ್ಯವಾಗಿ ನುಡಿಯಬೇಕೆಂದರೆ ಮಿಥ್ಯಾಚಾರವನ್ನು ಟೀಕಿಸಲೇಬೇಕು.<br>ಆದರೆ ಯಾರನ್ನು, ಎಲ್ಲಿ, ಹೇಗೆ ಟೀಕಿಸಬೇಕು ಎಂಬುದನ್ನು ವಿವೇಚಿಸಿ ನುಡಿಯಬೇಕು.<br>ಹಾಗಿಲ್ಲದಿದ್ದರೆ, ಸತ್ಯವಂತರಿಗೆ ಇಲ್ಲಿ ಉಳಿಗಾಲವಿಲ್ಲ; ಇದಕ್ಕೆ ಚರಿತ್ರೆಯೇ ಸಾಕ್ಷಿ. |
| ೧೬೦ | ಸತ್ಯವು ಬ್ರಹ್ಮದ ಅಸ್ತಿತ್ವವು; ಋತವು ಬ್ರಹ್ಮದ ವ್ಯವಸ್ಥೆಯು.<br>ಬ್ರಹ್ಮದ್ದಲ್ಲದ ವ್ಯವಸ್ಥೆಯು ಅನೃತವು; ಬ್ರಹ್ಮದ್ದಲ್ಲದ ಅಸ್ತಿತ್ವವು ಅಸತ್ಯವು.<br>ಋತವನ್ನು ಅಲ್ಲಗಳೆದು ಅಸತ್ಯವನ್ನಾಚರಿಸುವುದು ಮಿಥ್ಯೆಯು. |
| ೧೬೧ | ಸನಾತನ ಧರ್ಮವು ಆಸಕ್ತಿಮಾರ್ಗವನ್ನು ಬೋಧಿಸುತ್ತದೆ. ಬೇರೆ ಧರ್ಮಗಳು ವಿರಕ್ತಿಮಾರ್ಗವನ್ನು<br>ಬೋಧಿಸುತ್ತವೆ. ಸನಾತನ ಧರ್ಮವು ಬದುಕನ್ನು ಪ್ರೀತಿಸುವಂತೆ ಮಾಡಿದರೆ, ಬೇರೆ ಧರ್ಮಗಳು ಬದುಕನ್ನು<br>ದ್ವೇಷಿಸುವಂತೆ ಮಾಡುತ್ತವೆ. |
| ೧೬೨ | ಸನ್ಯಾಸಿಯು ಸಂಸಾರಿಯನ್ನೇ ಅವಲಂಬಿಸಿರುವಾಗ, ಹೇಗೆ ಸಂಸಾರವು ಹೇಯ ಅಥವಾ ತುಚ್ಛ? ಸಂಸಾರಿ |

| | |
|---|---|
| | ನೀಡುವ ದಾನದಿಂದಲೇ ಸನ್ಯಾಸಿಯ ಜೀವನ ನಡೆಯುತ್ತಿರುವಾಗ, ಸಂಸಾರಿಗಳನ್ನು ಹೀಯಾಳಿಸಲು ಸನ್ಯಾಸಿಗೆ ಯಾವ ಹಕ್ಕಿದೆ? ನಿಜವಾದ ಸನ್ಯಾಸದ ಅರ್ಥವು ಸನ್ಯಾಸಿಗಳಿಗೆ ತಿಳಿದಿದೆಯೇನು? ಋಷಿಗಳೆಲ್ಲರೂ ಸಂಸಾರಿಗಳಲ್ಲವೇನು? ಶ್ರೀ ರಾಮ, ಶ್ರೀ ಕೃಷ್ಣರು ಸಂಸಾರಿಗಳಲ್ಲವೇನು? ಸಂಸಾರದಲ್ಲಿದ್ದುಕೊಂಡು ಸನ್ಯಾಸವನ್ನು ಆಚರಿಸುವವನೇ ನಿಜವಾದ ಯೋಗಿಯು. |
| ೧೬೩ | ಸಮಾಧಿಯನ್ನು ಹೊಂದುವ ಇಚ್ಛೆಯು ಇಲ್ಲದೇ ಇದ್ದರೆ ಸಮಾಧಿಯನ್ನು ಹೊಂದಲಾಗದು. ಸಮಾಧಿಯನ್ನು ಹೊಂದುವ ಇಚ್ಛೆಯು ಇದ್ದರೆ ಕೂಡಾ ಸಮಾಧಿಯನ್ನು ಹೊಂದಲಾಗದು. |
| ೧೬೪ | ಸಮಾಧಿಯನ್ನು ಹೊಂದುವ ಮೊದಲೇ, ಸಮಾಧಿಯಿಂದ ಹೊರಬರುವ ಸಂಕಲ್ಪವಿದ್ದರೆ, ಸಮಾಧಿಯನ್ನು ಹೊಂದಲಾಗದು. ಯಾಕೆಂದರೆ ಸಮಾಧಿಯೆಂಬುದು ದೇಶ–ಕಾಲಗಳಿಗೆ ಅತೀತವಾದುದು. |
| ೧೬೫ | ಸರ್ವೋಚ್ಚ ಸತ್ಯಗಳನ್ನು ನಿರ್ಭಿಡೆಯಿಂದ ವಿವರಿಸುವ ಅದ್ಭುತ ಗ್ರಂಥಗಳು – ಉಪನಿಷತ್ತುಗಳು. ಅನಾಮಧೇಯ ಋಷಿಗಳ ಅಲೌಕಿಕ ವಾಣಿಗಳ ಅನನ್ಯ ಸಂಗ್ರಹಗಳು – ಉಪನಿಷತ್ತುಗಳು. ಆದ್ದರಿಂದ ಮೊದಲು ಉಪನಿಷತ್ತುಗಳ ಅಧ್ಯಯನ ಮಾಡಿ; ಆಮೇಲೆ ಏನು ಬೇಕಾದರೂ ಓದಿ. |
| ೧೬೬ | ಸಾಂಖ್ಯಯೋಗಿಗೆ ಜನರಿಂದ ಪ್ರಯೋಜನವಿಲ್ಲ; ಜನರಿಗೆ ಸಾಂಖ್ಯಯೋಗಿಯಿಂದ ಪ್ರಯೋಜನವಿಲ್ಲ. ಕರ್ಮಯೋಗಿಗೆ ಜನರಿಂದ ಪ್ರಯೋಜನವಿಲ್ಲ; ಕರ್ಮಯೋಗಿಯಿಂದ ಜನರಿಗೆ ಪ್ರಯೋಜನವಿದೆ. ಆದ್ದರಿಂದ ಕರ್ಮಯೋಗವೇ ಶ್ರೇಷ್ಠ. |
| ೧೬೭ | ಸಿದ್ಧನಾಗುವುದು ಸುಲಭ; ಬುದ್ಧನಾಗುವುದು ಕಷ್ಟ. ಬುದ್ಧನಾಗುವುದು ಸುಲಭ; ಬದ್ಧನಾಗುವುದು ಕಷ್ಟ. ಬದ್ಧನಾಗುವುದು ಸುಲಭ; ಶುದ್ಧನಾಗುವುದು ಕಷ್ಟ. ಶುದ್ಧನಾಗುವುದು ಸುಲಭ; ಸಿದ್ಧನಾಗುವುದು ಕಷ್ಟ. |
| ೧೬೮ | ಸುಷುಪ್ತಿಯ ಅರಿವನ್ನು ಜಾಗ್ರತ್ತಿಗೆ ತರುವುದು ಯೋಗ; ಜಾಗ್ರತ್ತಿನ ಅರಿವನ್ನು ಸುಷುಪ್ತಿಗೆ ಒಯ್ಯುವುದು ರೋಗ. |
| ೧೬೯ | ಹಿಂದಿನ ಜನ್ಮದ ಋಣಾನುಬಂಧಗಳು ಈ ಜನ್ಮದ ರಕ್ತಸಂಬಂಧಗಳು; ಈ ಜನ್ಮದ ಋಣಾನುಬಂಧಗಳು ಮುಂದಿನ ಜನ್ಮದ ರಕ್ತಸಂಬಂಧಗಳು. |
| ೧೭೦ | ಹಿತವಾದ ಸುಳ್ಳುಗಳನ್ನು ಹೇಳುವವರು ಭೋಗಿಗಳು; ಕಟುವಾದ ಸತ್ಯಗಳನ್ನು ನುಡಿಯುವವರು ಯೋಗಿಗಳು. ಸುಳ್ಳುಗಳನ್ನು ಕೇಳಿಕೊಂಡು ಬದುಕುವವರು ರೋಗಿಗಳು; ಸತ್ಯಗಳನ್ನು ಆಲಿಸಿಕೊಂಡು ಬಾಳುವವರು ತ್ಯಾಗಿಗಳು. |
| ೧೭೧ | ಹಿತೈಷಿಗಳಾದವರು ಹಿಂದಿನಿಂದ ಹೊಗಳುತ್ತಾರೆ, ಮತ್ತು ಮುಂದಿನಿಂದ ಟೀಕಿಸುತ್ತಾರೆ; ಹಿತೈಷಿಗಳಲ್ಲದವರು ಮುಂದಿನಿಂದ ಹೊಗಳುತ್ತಾರೆ, ಮತ್ತು ಹಿಂದಿನಿಂದ ಟೀಕಿಸುತ್ತಾರೆ. |
| ೧೭೨ | ಹುಟ್ಟಿದವರೆಲ್ಲರೂ ಮತ್ತೊಂದು ಜನ್ಮವನ್ನು ಪಡೆದೇ ಹುಟ್ಟಿರಬೇಕೆಂದೇನಿಲ್ಲ. ಸತ್ತವರು ಬಹುತೇಕ ಮತ್ತೊಂದು ಜನ್ಮವನ್ನು ಪಡೆದುಕೊಂಡೇ ಹುಟ್ಟುತ್ತಾರೆ. ಯಾರು ಮತ್ತೆ ಹುಟ್ಟುವುದಿಲ್ಲವೋ ಅವರೆಲ್ಲರೂ ಮುಕ್ತರು, ಅತೀತರು. |
| ೧೭೩ | ಹುಟ್ಟು–ಸಾವುಗಳ ನಡುವಿನ ಅಂತರದಲ್ಲಿ ಅರ್ಥವನ್ನು ಕಂಡು ಜೀವಿಸುವವನು ಭೋಗಿಯು, ಅನರ್ಥವನ್ನು ಕಂಡು ಬದುಕುವವನು ರೋಗಿಯು, ಅರ್ಥಾನರ್ಥಗಳನ್ನು ವಿವೇಚಿಸಿಕೊಂಡು ಬಾಳುವವನು ಯೋಗಿಯು. |
| ೧೭೪ | ಹೂವು ತನ್ನ ಪ್ರಕೃತಿಯ ಸಮಯದ ಮಿತಿಯಂತೆಯೇ ಅರಳಬೇಕು; ಇದರಿಂದ, ಹೂವಿಗೂ ಯೋಗ ಹಾಗೂ ಗಿಡಕ್ಕೂ ಕ್ಷೇಮ. ಆದ್ದರಿಂದ, ತಾನು ಮೊಗ್ಗಾಗಿರುವಾಗ, ಹೂವು ಬೇಗನೇ ಅರಳುವ ಪ್ರಯತ್ನವನ್ನು ಮಾಡಬಾರದು; ತನ್ನ ಸಮಯದ ಪ್ರಾಪ್ತಿಗೋಸ್ಕರ ಕಾಯಬೇಕು; ಹಾಗಿಲ್ಲದೇ, ತ್ವರಿತವಾಗಿ ಅರಳಲು ಪ್ರಯತ್ನಿಸಿದರೆ ಹೂವಿನ ಜೊತೆಗೆ ಗಿಡಕ್ಕೂ ನೋವಾದೀತು. ಇಷ್ಟಲ್ಲದೇ, ಹೂವು ತಾನು ಅರಳಲಾರೆನೆಂದು ಕುಗ್ಗಲೂ ಬಾರದು, ಅಥವಾ ತಾನು ಅರಳಲೊಲ್ಲೆನೆಂದು ತಗ್ಗಲೂ ಬಾರದು; ಆಗ ಮೊಗ್ಗಿನಲ್ಲಿಯೇ ಬಾಡಿ |

| | |
|---|---|
| | ಬಿದ್ದು ಹೋದೀತು, ಹಾಗೂ ತನ್ನ ಹಿಗ್ಗನ್ನು ತಾನೇ ಕಳೆದುಕೊಂಡೀತು. ಮೊದಲನೆಯದು ಸುಯೋಗ; ಎರಡನೆಯದು ದುರ್ಯೋಗ; ಮೂರನೆಯದು ವಿಯೋಗ. |
| ೧೭೫ | ಹೇಗೆ ನಿನ್ನ ಮೈಯ ಮೇಲೆ ಚಲಿಸುವ ಇರುವೆಗೆ ಅದು ನಿನ್ನ ಶರೀರವೆಂದು ತಿಳಿದಿಲ್ಲವೋ, ಹೇಗೆ ಇರುವೆಯ ಮೈಯೊಳಗೆ ಚಲಿಸುವ ಜೀವಕೋಶಕ್ಕೆ ಅದು ಇರುವೆಯ ದೇಹವೆಂದು ತಿಳಿದಿಲ್ಲವೋ, ಹಾಗೆಯೇ ನೀನು ಬ್ರಹ್ಮದೊಳಗೆ ಚಲಿಸುತ್ತಿರುವೆಯೆಂಬುದು ನಿನಗೆ ಸರ್ವಥಾ ತಿಳಿಯದು. ಅದು ನಿನ್ನ ಅರಿವಿಗೆ ಬರುವುದು ನಿನ್ನ ದೇಹಭಾವ ಅಳಿದಾಗ ಮಾತ್ರ. |

**ಅರವಿಂದ ಕೆ.**

**೨೫.೦೫.೨೦೧೭**